Reg. No. M. 1550.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5–0–0.

ಸಂಪುಟ ೨೮ | ತಾರೀಕು ೨೭–೧–೧೯೫೦ನೇ ಶುಕ್ರವಾರ | ಸಂಚಿಕೆ ೩೫

ಭಾರತದ ಹೊಸ ಅಧ್ಯಕ್ಷ

ರಾಜೇಂದ್ರ ಪ್ರಸಾದರು.

ಲೇ:—ಡಾ. ಪಟ್ಟಾಭಿಸೀತಾರಾಮಯ್ಯನವರು.

ಪ್ರಸಿದ್ಧಿ ಪಡೆದ ಪ್ರಾಮುಖ್ಯ ವ್ಯಕ್ತಿ ಸದ್ಗುಣಿಯಾಗಿರಬೇಕೆಂದಿಲ್ಲ. ಸದ್ಗುಣಿಯಾದವನು ಪ್ರಸಿದ್ಧನಾಗಿರಬೇಕೆಂದೂ ಇಲ್ಲ. ಪ್ರತಿಷ್ಠೆ ಮತ್ತು ಸದ್ಗುಣ ಎರಡು ಸಮರಸವಾಗಿ ಏಕನ್ಯಕ್ತಿಯಲ್ಲಿ ಕೂಡಿರುವದು ಅಪರೂಪ. ಪ್ರತಿಷ್ಠೆ, ಪ್ರಸಿದ್ಧಿಯು ಸದ್ಗುಣಜನ್ಯವಾಗಿರಬಹುದು. ಸದ್ಗುಣವು ಪ್ರಸಿದ್ಧಿಯಿಂದ ರೂಪಿತವಾಗಿ ಶೋಭಿಸಬಹುದು. ಒಳ್ಳೇ ಸದ್ಗುಣಿಯು ಹಲವು ವೇಳೆ ನಿರ್ಬಲವ್ಯಕ್ತಿಯಾಗಿರುವದೂ ಇದೆ. ಯಾರನ್ನೂ ನೋಯಿಸಬಾರದು. ಯಾರಿಗೂ ವಿರೋಧ ನುಡಿಯಬಾರದೆಂದೂ, ತನ್ನ ಕರ್ತವ್ಯದ ವಿಚಾರದಲ್ಲಿ ಕಠಿಣ ಭಾವವನ್ನು ತಾಳಲಾರದೆ ವರ್ತಿಸುವ ನಿಶ್ಚಲರಾದ ಗುಣವಂತರೂ ಇದ್ದಾರೆ. ಇವನ್ನು ಸಂಪೂರ್ಣ ಸದ್ಗುಣವೆಂದು ಹೇಳಲಾಗುವುದಿಲ್ಲ. ನಿರ್ಬಲತೆಯು ಎಂದೂ ಒಳ್ಳೇತನದ ಸ್ಥಾನವನ್ನಲಂಕರಿಸದು. ಪ್ರತಿಹಿಂಸೆಯು ಎಂದೂ ಘನತೆಯ ಗದ್ದುಗೆ ಏರದು. ಸದ್ಗುಣವು ಹೃದಯದ ಮೂತ. ಘನತೆಯು ಹೃದಯದ ಒಲವಿನೊಂದಿಗೆ ಸೇರಿದ ಮೆದುಳಿನ ಮತ್ತು ಕೈಗಳ ಕೃತಿ. ಹೃದಯ, ತಲೆ ಮತ್ತು ಕೈ ಇವು ಮೂರು ಸಹಕರಿಸಿ ಒಂದಕ್ಕೊಂದು ಹೊಂದಿಕೊಂಡು ದುಡಿದಾಗ ಘನತೆ ಮತ್ತು ಸದ್ಗುಣ ಎರಡೂ ಕರಗತವಾಗುವುವು. ಬುದ್ಧಿಯು ಇಚ್ಛಿಸಿದುದನ್ನು ಕೈಯು ತಿರಸ್ಕರಿಸದೆ, ಹೃದಯದ ಒಲವನ್ನು ಬುದ್ಧಿಯು ನಿರಾಕರಿಸದೆ ವರ್ತಿಸುವದೇ ಈ ಸಮರಸ ಕರ್ಮ. ಈ ದೃಷ್ಟಿಯಿಂದ ಬಾಬು ರಾಜೇಂದ್ರ ಪ್ರಸಾದರು ಸದ್ಗುಣಿಯೂ ಹೌದು, ಘನವ್ಯಕ್ತಿಯೂ ಹೌದು.

ಸರ್ದಾರರ ಕಟ್ಟುನಿಟ್ಟಿನ ಶಿಸ್ತು ಮತ್ತು ಸಂಘಟನೆ, ಶೀಘ್ರ ವರ್ತನೆ ಇವು ರಾಜೇಂದ್ರರಲ್ಲಿಲ್ಲವೆನ್ನಿಸದಾದರೆ ಆದು ಅನರವರ ತ್ರರಬೇತು ಮತ್ತು ಶಾರೀರಿಕ ಶಕ್ತಿಗನುಗುಣವಾಗಿದೆ. ಈ ಎರಡು ಮಹಾ ಖ್ಯಾತಿಯ ವಕೀಲರಲ್ಲಿ ಒಬ್ಬರು ಕ್ರಿಮಿನಲ್ ಖಾನೂನಿನಲ್ಲಿ ಮತ್ತೊಬ್ಬರು ಸಿವಿಲ್ ಖಾನೂನಿನಲ್ಲೂ ಹೆಸರು ಪಡೆದವರು. ಈ ಎರಡು ಕ್ಷೇತ್ರಗಳಿಗನುಗುಣ ಅವರಲ್ಲಿ ವ್ಯತ್ಯಾಸವಿರಲೇಬೇಕು. ಕೆಲಸವೇ ಮೆ ಮನುಷ್ಯನನ್ನು ರೂಪಿಸುವ ವಸ್ತು, ಅತನ ಭಾವನೆಯನ್ನು ಪ್ರಚೋದಿಸಿ, ಅತನ ಗುಣನಡತೆಗಳನ್ನು ತಿದ್ದುವ ಶಕ್ತಿಯೂ ಅದೇ. ಕ್ರಿಮಿನಲ್ ಲಾಯರಿಗೆ ವಿಳಂಬ ಮಾಡಲು ಸಮಯವಿಲ್ಲ. ತನ್ನ ವಾದವನ್ನು ರಚಿಸಿ ಆದಕ್ಕನುಗುಣ ವರ್ತಿಸಬೇಕು. ಹೊಳೆಯ ಮಧ್ಯದಲ್ಲಿ ದೋಣಿ ಬದಲು ಮಾಡುವ ಅನು ಅವರಿಗಿಲ್ಲ. ಸಿವಿಲ್ ಲಾಯರ್ ಹಾಗಲ್ಲ. ವಿಚಾರ ನಡೆನಡೆದಂತೆಯೇ ತನ್ನ ವಾದವನ್ನು ಬಲಸಡಿಸುತ್ತ ಹೊಸ ಕಾರಣಗಳನ್ನು ಸೇರಿಸುತ್ತಾ, ಸಾಕ್ಷಿಗಳ ಮಾತಿನಬಲವನ್ನು ಉಪಯೋಗಿಸುತ್ತಾ, ಹೊಸ ವಾರ್ಗಗಳನ್ನು ಹುಡುಕುತ್ತಾ ಸಾಗುವನು. ಕಡೆಯವರೆಗೆ ಅಲ್ಲಿ ಬದಲಾವಣೆಗೆ ಅವ್ಪದವಿದೆ. ಆದ್ದರಿಂದ ಸರ್ದಾರ ಪಟೇಲರಂತೆ ರಾಜೇಂದ್ರರ ತೀರ್ಮಾನಗಳು ಮಿಂಚಿನಂತೆ ಹೊಳೆಯವು. ರಾಜೇಂದ್ರರ ಸ್ವಭಾವದಲ್ಲಿ ನಯ, ದಯಗಳು ತುಂಬಿವೆ. ಸರ್ದಾರರದ್ದು ಎಡೆಯಿಲ್ಲದ ತೀರ್ಮಾನ. ಬೆಯವಿಲ್ಲದ ಕ್ರಿಯೆ.

ಪಂಡಿತ ಜವಾಹರಲಾಲರಿಂದ ರಾಜೇಂದ್ರ ಬಾಬುಗಳು ಭಿನ್ನವಾಗಿದ್ದರೆ ಅದಕ್ಕೆ ಪ್ರಾಮುಖ್ಯವಾಗಿ ಅವರ ಶಾರೀರಿಕ ಅಡಚಣೆಯೇ ಕಾರಣ. ರಾಜಕೀಯದಲ್ಲಿ ಶಾರೀರಿಕ ಆರೋಗ್ಯವು ಪ್ರಾಮುಖ್ಯ. ಅದರೂ ಕೂಡ ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದಾಗ ಅಂದರೆ ೧೯೩೮–೩೯–೩೬ರಲ್ಲಿ ಅವರು ದೇಶದ ಮೂಲೆ ಮೂಲೆಗಳನ್ನು ಜೇಗೆ ಸುತ್ತಿ ದುಡಿದರೆಂಬುದು ಎಲ್ಲರ ಜ್ಞಾಪಕದಲ್ಲಿರಬಹುದು. (ಆ ಸಮಯದಲ್ಲಿ ಅವರು ಕೊಡಗಿಗೂ ಬಂದಿದ್ದರು.) ದೇಶದಲ್ಲಿ ಯೂ ಕಾಂಗ್ರೆಸ್ ಸಂಸ್ಥೆಯಲ್ಲಿ ಬಿಕ್ಕಟ್ಟು ಬಂದಾಗ ಮಹಾತ್ಮಾಗಾಂಧೀಯವರಿಗೂ, ಅವರ ಜೊತೆಗಾರರಿಗೂ ರಾಜೇಂದ್ರಪ್ರಸಾದರ ಹೆಸರು ಫಕ್ಕನೆ ಬರುತಿತ್ತು. ೧೯೪೯ರಲ್ಲಿ ಕಾಂಗ್ರೆಸ್ ಅಧ್ಯಕ್ಷತನಕ್ಕೆ ನೇತಾಜಿ ಸುಬಾಶಚಂದ್ರರು ರಾಜಿನಾಮೆ ಕೊಟ್ಟಾಗ, ೧೯೪೬ರಲ್ಲಿ ಆಚಾರ್ಯ ಜೆ. ಬಿ. ಕೃಪಲಾನಿಯವರು ಅಧ್ಯಕ್ಷತನಕ್ಕೆ ರಾಜಿನಾಮೆ ಇತ್ತಾಗ ರಾಜೇಂದ್ರ ಪ್ರಸಾದರೇ ತೆರವಾದ ಸ್ಥಳವನ್ನು ತುಂಬಬೇಕಾಯಿತು. ಅವರ ಉತ್ಸಂಗ ಭಾವನೆ, ಸಾಧು ಮತ್ತು ವಿರಕ್ತ ಸ್ವಭಾವ ಇವು ಅನೇಕ ಶೀಘ್ರವರ್ತನೆಯ ರಾಜಕಾರಣಿಗಳ ಸ್ವಭಾವಕ್ಕೆ ವಿರುದ್ಧವಿದೆ. ಅವರು ತಾನು ಹಿಡಿದದ್ದೇ ಸಾಧಿಸಬೇಕೆಂದು ವಾದಿಸುವವರಲ್ಲ; ತನ್ನ ಅಭಿಪ್ರಾಯವನ್ನು ಮತ್ತೊಬ್ಬರ ಮೇಲೆ ಹೇರುವವರಲ್ಲ. ರಾಜಕೀಯ ಶಾಸ್ತ್ರದಲ್ಲಿ ನಿಸ್ಸೀಮರೂ, ಹೆಸರು ಪಡೆದವರೂ ಕೂಡ ರಾಜೇಂದ್ರಪ್ರಸಾದರ ಆ ಸರಳ ವರ್ತನೆ, ನಿಷ್ಕಲ್ಮಶ ಸ್ವಭಾವ, ಅವರ ಮೆದುಳಿನ ಮತ್ತು ಅಂತರಿಕ ಸ್ವಚ್ಛತೆಗಳಿಗಾಗಿ ಆಶೆಪಡಬೇಕು!

ರಾಜೇಂದ್ರ ಬಾಬುಗಳು ಜನತೆಯ ಅನುರಾಗಕ್ಕೆ ಪಾತ್ರರಾದವರೇ ಅಲ್ಲ; ಅವರ ಜೊತೆಗಾರರು ಹಿರಿಯರೇ ಇರಲಿ ಯೂ ಕಿರಿಯರೇ ಇರಲಿ ಎಲ್ಲರ ಬಗ್ಗೆ ಅವರ ಸಮನ್ವಯ ಪ್ರೇಮ ವಿದೆ. ಹಿರಿಯರಿಗೆ ಅವರು ಕೊಡುವ ಗೌರವ, ಸಮಾನರಿಗೆ ಕೊಡುವ ಮರ್ಯಾದೆ ಮತ್ತು ಕಿರಿಯರಿಗೆ ಕೊಡುವ ಮಮತೆ ಇವು ತಾವು ಹೊತ್ತ ಯಾವದೇ ಮಹಾ ಜವಾಬ್ದಾರಿಯನ್ನು ಘರ್ಷಣೆ ಇಲ್ಲದೆ ಹಗುರವಾಗಿ ನಿರ್ವಹಿಸಲು ಅವರಿಗೆ ಸಹಾಯಕವಾಗಿವೆ. ಅವರು ಸುಲಭದಲ್ಲಿ ತನ್ನ ಸಹೋದ್ಯೋಗಿಗಳ ಅಮೂಲ್ಯ ಸಹಕಾರವನ್ನು ಪಡೆಯಬಲ್ಲರು. ತಮ್ಮ ಜೊತೆ ಕೆಲಸಗಾರರಿಗೆ ಅರ್ಥವಾಗದ ವ್ಯವಹಾರ ಅವರಲ್ಲಿಲ್ಲ. ಯಾವದೇ ಸಿಡುಕಿನ ಧೋರಣೆಯೂ ಇಲ್ಲ. ಅವರು ತಮ್ಮ ಭಾವನೆಯನ್ನು ನಿಸ್ಕಳಂಕವಾಗಿ ಹೇಳುತ್ತಾರೆ. ಅವರ ಮನಸ್ಸು ತೆರೆದ ಪುಸ್ತಕದಂತೆ ನಮ್ಮ ಬಗ್ಗೆ ಅವರ ಮನಸ್ಸಿನಲ್ಲಿದ್ದ ಅಭಿಪ್ರಾಯವನ್ನು ಅವರು ಸಂಕೋಚವಿಲ್ಲದೆ ಹೇಳಬಲ್ಲರು. ಕಷ್ಟದಲ್ಲಿರುವವರು ಅವರ ಸಲಹೆಯನ್ನು ಆಗಾಗ್ಗೆ ಯಾಚಿಸುವರು. ತಮ್ಮ ಭವಿಷ್ಯದ ಬಗ್ಗೆ ಅವರೊಡನೆ ಮಾತಾಡಿಕೊಳ್ಳುವರು. ಎಲ್ಲರಿಗೂ ಸೂಕ್ತವಾದ ಮಾರ್ಗದರ್ಶನ ನೀಡಿಕೊಡುವ ಸಹನೆ ಅವರಲ್ಲಿದೆ.

ಸಮ್ಮೆಲ್ಲಿ ಎಲ್ಲರಲ್ಲೂ ಇಲ್ಲವಿದ್ದರೂ ಒಂದೊಂದು ವಿಶೇಷ ಸ್ವಭಾವ ಒಬ್ಬೊಬ್ಬರಲ್ಲಿರುವದನ್ನು ನಾವು ಕೇಳಿದುವೆವು. ಕಲವರು ಮಾತಾಡುವಾಗ ತಪ್ಪುಗಳನ್ನು ನಾನಾವಿನ್ಯಾಸದಿಂದ ತಿರುಗಿಸುತ್ತಾರೆ. ಕೆಲವರು ಹುಬ್ಬುಗಳನ್ನು ಮೇಲಕ್ಕೆತ್ತುತ್ತಾರೆ. ಕೆಲವರು ಕಣ್ಣಿನ ಗೊಂಬೆಯನ್ನು ಆತ್ತಿತ್ತ ಹೊರಳಿಸುತ್ತಾರೆ. ಕೆಲವರು ಹೊತಾಡುವಾಗ ತಲೆ ಕೆರೆಯುತ್ತಾರೆ. ರಾಜೇಂದ್ರ ಪ್ರಸಾದರಿಗೂ ಇಂಥಾ ಒಂದು ಸ್ವಭಾವ ಅವರಿಗೆ ತಿಳಿಯದೆ ಇದೆ. ಕೆಲವರು ಬರೆಯುವಾಗ ಬಾಯೊಳಗೆ ನಾಲಿಗೆಯನ್ನು ಅದಕ್ಕನುಗುಣ ಅಲ್ಲಾಡಿಸುತ್ತಾರೆ. ರಾಜೇಂದ್ರಪ್ರಸಾದರಲ್ಲೂ ಆ ರೀತಿ!

ರಾಜೇಂದ್ರಪ್ರಸಾದರು ನ್ಯಾಯಶಾಸ್ತ್ರ, ಸಾಹಿತ್ಯ, ಇಂಗ್ಲಿಷ್, ಹಿಂದೀ ಮತ್ತು ಪರ್ಶಿಯನಿನಲ್ಲಿ ಮಹಾನಿಷ್ಣಾತ ಪಂಡಿತರು. ಅವರ ಭಾಷಣ ಶೈಲಿ, ಭಾವಗಳ ಹೃದಯವರಿತ ಮಂಡನೆ, ಸ್ಪಷ್ಟ ಉಚ್ಚಾರಣೆ ಇವು ಅವರನ್ನು ಉತ್ತಮ ಭಾಷಣಕಾರರಿನಿಸಿದೆ. ಸಾಮಾನ್ಯ ಜ್ಞಾನದೊಂದಿಗೆ ಪರಿಷ್ಕೃತ ನ್ಯಾಯಶಾಸ್ತ್ರದ ಮಿಲನ ಮಾಡಿ ಅವರು ಜನತೆಯ ಮುಂದಿಡುತ್ತಾರೆ. ಸಾರ್ವಜನಿಕರ ಮುಂದೆ ತಮ್ಮ ಅಭಿಪ್ರಾಯಗಳನ್ನು ಅವರು ಹೇರುವದಿಲ್ಲ. ದೇಶದ ಆವಶ್ಯಕತೆಯನ್ನು ನೋಡಿ ಸಾರ್ವಜನಿಕ ಅಭಿಪ್ರಾಯವನ್ನು ತಿದ್ದಲು ಅವರು ಹೆದರುವದೂ ಇಲ್ಲ. ಇಂಥಾ ಕಾಲಕ್ಕೆ ಅವರ ವರ್ತನೆ ಪಕ್ವತೀತವೂ, ನ್ಯಾಯಸಮರ್ಪಕವೂ ಆಗಿದ್ದು ಯಾರಿಗೆ ತನ್ನನ್ನೂ ಇವರು ಕಟ್ಟಿಕೊಳ್ಳಲು ಅಸಮರ್ಥರು!

೧೯೧೭ರಲ್ಲಿ ತನ್ನ ಲಾಯರ್ ವೃತ್ತಿಯು ಅಲ್ಲಿ ಘನತೆಯ ಶಿಖರಕ್ಕೇರುತ್ತಿದ್ದ ಆ ಕಾಲದಲ್ಲಿ ಚಂಪಾರಣ್ಯದ ಜಳಪಳದಲ್ಲಿ ಭಾಗವಹಿಸಲು ಗಾಂಧೀಜಿಯವರಿಂದ ರಾಜೇಂದ್ರ ಬಾಬುಗಳು ಆಮಂತ್ರಿತರಾದರೆಂಬಾದು ಬಹುಶಃ ಬಹು ಜನರಿಗೆ ತಿಳಿದಿರಲಾರದು. ಚಂಪಾರಣದಲ್ಲಿ ನೀಲಿ ವ್ಯವಸಾಯಗಾರರು ತಮ್ಮ ಯೂರೋಪಿಯನ್ ಪ್ಲಾಂಟರುಗಳಿಗೆ ಒಳ ಅನೈತಿಕ ಕಂದಾಯ ತೆರುತಿದ್ದರು. ಗಾಂಧೀಜಿಯವರ ಆನುಯಾಯಿಯಾಗಿ ರಾಜಕೀಯ ತರಬೇತು ಅವರಿಗೆ ಇಲ್ಲಿ ದೊರೆಯಿತು.

ಚಂಪಾರಣ್ಯ ಬಾರ್‌ಸದ್, ಅಹಮ್ಮದಾಬಾದ್‌ಗಳಲ್ಲಿ ತನ್ನೊಡನೆ ದುಡಿದವರ ಮೇಲೆ, ನಂತರ ಸಬರಮತಿ ವಾರ್ಧಾಗಳಲ್ಲಿ ಶ್ರಮಿಸಿದವರ ಮೇಲೆ, ಅನಂತರ ರಾಷ್ಟ್ರೀಯ ಸಂಗ್ರಾಮದಲ್ಲಿ ತನ್ನೊಡನೆ ದುಡಿದವರ ಮೇಲೆ, ಆದರನಂತರ ತನ್ನ ನೀತಿ ತತ್ವಗಳನ್ನು ವಿರೋಧಿಸುವವರ ಮೇಲೆ ಗಾಂಧೀಜಿಯವರಿಗೆ ಅನುಕ್ರಮವಾದ ಪ್ರೀತಿ ವಿಶ್ವಾಸಗಳಿದ್ದವು. ರಾಜೇಂದ್ರ ಪ್ರಸಾದರು ಪ್ರಥಮ ಗುಂಪಿಗೆ ಸೇರಿದವರು. ಗಾಂಧೀಜಿಯವರ ಕಡೇತನಕವೂ ಅವರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿದ್ದರು. ಪಾಟ್ನಾದ ಸರ್ವಸ್ವವಾದ ರಾಜೇಂದ್ರರು ಉತ್ತಮ ವಾಗ್ಮಿಗಳೂ ಬರಹಗಾರರೂ ವಕ್ತ್ರು ಕಲಸಗಾರರೂ ಆಗಿದ್ದು ಅವರಿಗೆ ಈ ಅಮೂಲ್ಯವಾದ ಮೂರು ಅಪೂರ್ವ ಅರ್ಹತೆ ಇತ್ತು. ಭಾಷಣಕಾರರೆಂದರೆ ಟೊಳ್ಳು ಮಾತು ಸರಳವೂ ಹೃದಯವನ್ನು ಮುಟ್ಟುವಂಥಾದ್ದು ಆಗಿದೆ. ಲೇಖಕರೆಂದರೆ ಅತಿ ಪರಿಶ್ರಮದಿಂದ ಹದವರಿತು ಬರೆಯುವ ಕೈ ಅವರದು. ಕಲಸಗಾರರೆಂದರೆ ಹೃತ್ಪೂರ್ವಕ ದುಡಿಯುವವರು ಗಾಂಧೀಜಿಯವರ ಕಲ್ಪನೆಯು ಸತ್ಯಾಗ್ರಹಿಗೆ ಬೇರೇನು ಬೇಕು? ಸತ್ಯದ ಹೆಂಬಲವು ಮಾನವನಲ್ಲಿ ದೈನ್ಯತೆಯನ್ನು ಹೆಚ್ಚಿಸುತ್ತದೆ. ಅಹಿಂಸೆಯು ಪ್ರೀತಿಯು ಸಹನೆ, ದಯೆಗಳನ್ನು ಹೆಚ್ಚಿಸಿ ಸಿಟ್ಟು ದ್ವೇಶಗಳಿಂದ ದೂರ ಮಾಡಿ ಶತ್ರುವನ್ನು ಪ್ರೀತಿಸುವ ಮನವನ್ನು ಕೊಡುತ್ತದೆ. ರಾಜೇಂದ್ರ ಬಾಬುಗಳಿಗೆ ಸಿಟ್ಟೆಬಂದಿಲ್ಲ. ತನ್ನ ಸಿಟ್ಟನ್ನು ಹಿಡಿತದಲ್ಲಿಟ್ಟು ವಿಧಾಯಕ ಕಾರ್ಯಕ್ಕೆ ಬೇಕಾಗುವ ಜೀವಶಕ್ತಿಯಾಗಿ ಉಪಯೋಗಿಸಬಲ್ಲರು. ಬೀಹಾರ್ ಭೂಕಂಪ ಕಾಲಕ್ಕೆ ಅವರು ಮಾಡಿದ ಕೆಲಸವು ಭಾರತ ಸಾಮಾಜಿಕ ಸೇವೆಯ ಚರಿತ್ರೆಯಲ್ಲಿ ಅವರ ಬೃಹದ್ವ್ಯಾಪಕ್ಕೂ, ದಕ್ಷತೆಗೂ ಅತ್ಯುತ್ತಮ ಉದಾಹರಣೆಯಾಗಿದೆ.

ರಾಜೇಂದ್ರ ಪ್ರಸಾದರು ತಮ್ಮ ಭವಿಷ್ಯದ ಬಗ್ಗೆ ಆಲೋಚಿಸುವ ವ್ಯಕ್ತಿಯಲ್ಲ. ಯಾವದೇ ಗೌರವಕ್ಕೆ ಅವರು ಆಶಿಸಿದವರಲ್ಲ. ಆದರೆ ಎಲ್ಲಾ ಗೌರವಗಳು ಅವರ ಮೇಲೆ ಜನತೆಯಿಂದ ಹೇರಲ್ಪಟ್ಟಿವೆ. ಅವರು ಹಿಂದೀ ರಿಪಬ್ಲಿಕಿನ ಪೃಥ್ವಿ ಪೈಸಿಡೆಂಟ್‌ತನಕ್ಕೆ ಸ್ಪರ್ಧಿಸುವದಿಲ್ಲವಾಗಿ ಸ್ಪಷ್ಟವಾಗಿ ಹೇಳಿದರು. ಆದರೆ ಭರತಖಂಡವು ಆ ಅಮೂಲ್ಯ ಕಿರೀಟವನ್ನು ಅವರ ತಲೆಗೇ ಏನ್ನಿಸಿತು. ರಾಜಕೀಯ ರಂಗದ

ಲ್ಲಿ ಹೇಗೋ ಹಾಗೆಯೇ ವಿಧಾಯಕ ಕಾರ್ಯಕ್ಷೇತ್ರದಲ್ಲಿ ಗಾಂಧೀಜಿಯವರ ತತ್ವಗಳನ್ನು ಅನುಷ್ಠಾನದಲ್ಲಿ ತರಲು ಸತತ ದುಡಿಯುತ್ತಿರುವ ಏಕ ಮುಂದಾಳೆಂದರೆ ರಾಜೇಂದ್ರಬಾಬುಗಳು. ಅಖಿಲ ಭಾರತ ಸರ್ವೋದಯ ಸಂಘದ ಪ್ರೆಸಿಡೆಂಟರಾಗಿ ಇವರು ಅಮೂಲ್ಯ ಸೇವೆ ಮಾಡುತ್ತಿದ್ದಾರೆ. ಹೇಳ ಹೆಸರಿಲ್ಲದಿದ್ದ ಬೀಹಾರ್ ಪ್ರಾಂತವನ್ನು ಖಾದೀ ಪ್ರಾಂತವಾಗಿ ಮಾಡಿ ಈ ಕಳೆದ ಏಳು ವರ್ಷಗಳಲ್ಲಿ ಹಿಂದೂಸ್ಥಾನದ ಅತೀ ಮುಂದುವರಿದ ಪ್ರಾಂತವಾಗಿ ಮಾಡಿದ ಕೀರ್ತಿ ಇವರಿಗೆ ಸಲ್ಲುತ್ತದೆ.

ರಾಜ್ಯಘಟನಾ ಸಮಿತಿಯ ಅಧ್ಯಕ್ಷರಾಗಿ ಅಜಾತ ಶತ್ರುವೆಂಬ ಕೀರ್ತಿಯನ್ನು ಇವರು ಸಂಪಾದಿಸಿದ್ದಾರೆ. ಈ ಮೂರು ವರ್ಷಗಳ ಅವಧಿಯಲ್ಲಿ ಯಾರಿಗೂ ಒಂದು ಕಠಿಣ ಶಬ್ದ ಹೇಳಿದವರಲ್ಲ. ಶಾಂತಿನಿಕೇತನದಲ್ಲಿ ನಡೆದ ಜಗತ್ತಿನ ಶಾಂತಿ ಸಾಧಕರ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷರಾಗಿ ಜಗತ್ತಿಗೆ ಅಮೂಲ್ಯ ಸಂದೇಶವನ್ನು ಕೊಟ್ಟಿದ್ದಾರೆ. ಅವರು ಭಾರತ ರಿಪಬ್ಲಿಕಿನ ಪ್ರಥಮ ಪ್ರೆಸಿಡೆಂಟರಾಗಿರಲೀ ಯಾ ಯಾವುದೇ ಜವಾಬ್ದಾರಿ ಹೊತ್ತಿರಲೀ ಇಹ ಜೀವನದ ಈ ಯಾತ್ರೆಯಲ್ಲಿ ಅವರು ಸತ್ಯದ ಅನ್ವೇಷಕರು. ಜಗತ್ತಿನಲ್ಲಿ ಶಾಂತಿ ಸಹನೆಗಳಿಗಾಗಿ ಅವಿರತ ದುಡಿಯುವ ಸಾಧಕರು.

ಅನುವಾದ :— ಬಾ. ಪೆ. ಗ.

ರಿಪಬ್ಲಿಕ್ ಭಾರತದಲ್ಲಿ

ನಮ್ಮ ಕರ್ತವ್ಯ.

ಲೇ:—ಶ್ರೀ ಎ. ಲಕ್ಷ್ಮೀನಾರಾಯಣ ಆಳ್ವ.

ಇದೇ ಜನವರಿ ಇಪ್ಪತ್ತಾರರಂದು ಭಾರತವು ಸ್ವತಂತ್ರ ಸಾರ್ವಭೌಮ ಪ್ರಜಾರಾಜ್ಯವಾಗಿ ರೂಪುಗೊಳ್ಳಲಿದೆ. ಅಂದಿನಿಂದ ಪ್ರತಿಯೋರ್ವ ಭಾರತೀಯನೂ ಹೊಣೆಗಾರ ವ್ಯಕ್ತಿಯಾಗುವನು. ಆದ್ದರಿಂದ ನಾವೀಗ ಆತ್ಮ ನಿರೀಕ್ಷಣೆ ಮಾಡಿಕೊಂಡು ಮುಂದಿನ ಹಾದಿಯನ್ನು ನಿರ್ಣಯಿಸುವಷ್ಟರಲ್ಲಿ ಔಚಿತ್ಯವಿದೆ.

ಸ್ವಾತಂತ್ರ್ಯವೆಂದಕೂಡಲೆ ಸ್ವೇಚ್ಛಾಚಾರವೆಂದು ಬಗೆಯುವ 'ರಾಜಕಾರಣಿ'ಗಳೇ ಇಂದು ನಮಗೆ ಹೆಚ್ಚು ಮುಂದಿ ಕಂಡುಬರುತ್ತಿದ್ದಾರೆ. ಆದರೆ ತನ್ನನ್ನು ತಾನು ಹಿಡಿತದಲ್ಲಿಟ್ಟುಕೊಳ್ಳುವುದೇ—ಇಂದ್ರಿಯಗಳನ್ನು ತನ್ನ ವಶವರ್ತಿಗಳನ್ನಾಗಿ ಮಾಡಿಕೊಳ್ಳುವುದೇ—ನಿಜವಾದ ಸ್ವರಾಜ್ಯ. ತನ್ನ ಕರ್ತವ್ಯವನ್ನು ಪರಿಪೂರ್ಣವಾಗಿ ಸತತ ದುಡಿದು ದೇಶದ ಉನ್ನತಿಯನ್ನು ಮನಸಾ ಹಾರೈಸುತ್ತಿರುವನೇ ನಿಜವಾದ ಸ್ವಾತಂತ್ರ್ಯ ಪಡೆದವನು ಎಂದು ಜನತೆ ಆರಿಯುವುದಾಗಿದೆ.

ನಾಡಿಗೆ ಸ್ವಾತಂತ್ರ್ಯ ಬಂದೊಡನೆ ಉಣ್ಣಲು ಆಹಾರ, ಉಳಿಕೊಳ್ಳಲು ವಸತಿ, ಖರ್ಚಿಗೆ ಹಣ ಮತ್ತು ಇತರ ಸೌಕರ್ಯಗಳು ತಮ್ಮ ಕಾಲಬಳಿಗೆ ತನ್ನಿಂದ ತಾನೇ ಬಂದು ಬೀಳುವಹಾಗೆ ಹಲವಾರು ಅಜ್ಞ ಮುಂದಿ ಭಾವಿಸಿತ್ತು. ಶಾಂತಿಯ ಭಾವನೆಗೆ ಒಳಗಾಗಿತ್ತು. ಆದರೆ ಅನು ಹಾಗೆ ಸಿಗಹೆ ಹೇತಾಗಿ ಆ ಜನ ಕಂಗಾಲಾದರು. ಹೆಸರಿನ ಮೇತೆ ಆ ತಪ್ಪನ್ನು ಹೊರಿಸಲು ಪ್ರಾರಂಭಿಸಿದರು. ನೇವಲೋಕದ ಆನಂದಸುಖವನ್ನು ಕನಸಿನಲ್ಲಿ ಪಡೆಯುತ್ತಿರುವ ವ್ಯಕ್ತಿಯನ್ನು ಯಾರಾದರೂ ಎಚ್ಚರಿಸಲು ಅತು ಕಾರಣವಾಗಲು ವ್ಯಥೆಪಟ್ಟು ಎಚ್ಚರಿಸಿದವನನ್ನು ಗಸರಿಸುವಂತಾಯಿತು ಆ ಜನರ ರೀತಿ. ಅವರ ಈ ತಿಳಿಗೇಡಿತನ ಇನ್ನೂ ಕಳೆದಂತೆ ಕಾಣುವುದಿಲ್ಲ. "ನನ್ನ ದೇಶ ನನ್ನದಾಯ ಮೇಲೆ ಗೇಯುವ ಹುಂಬುಲವೇಕೆ? ನಮಗೆ ಬೇಕಾದ ಸೌಕರ್ಯಗಳನ್ನು ಸರಕಾರವೇ ಒದಗಿಸಿ ಕೊಡಬೇಕು. ಹಾಗೆ ಒದಗಿಸಿಕೊಡದಿದ್ದರೆ ಅದು ಅಕ್ಷಮ್ಯ ಅಪರಾಧ" ಎಂಬ ಮನೋಭಾವನೆಗೆ ಅವರು ಇನ್ನೂ ಅಂಟಿಕೊಂಡಿದ್ದಾರೆ. ಇಂತಹ ಮನೋವೃತ್ತಿ ನಿರಕ್ಷರರಲ್ಲೇನೋ ಕ್ಷಮ್ಯ. ಆದರೆ ಹಲವಾರು ಮುಂದಿ ಹೈಸ್ಕೂಲು 'ಜ್ಞಾನಿ'ಗಳು ಕೂಡಾ ಇದೇ ಮನೋಭಾವನೆಯನ್ನು ಕಟ್ಟಿಕೊಂಡು ಜನರಲ್ಲಾ ಹಬ್ಬಿಸಲು ಪ್ರಯತ್ನಿಸುತ್ತಿರುವುದು ಮಾತ್ರ ಅಕ್ಷಮ್ಯ. ಈ ಮನೋವೃತ್ತಿಯ ಹಿಂದೆ ಸ್ವಾರ್ಥವು ಪರಾರ್ಥದ ವೇಷ ಧರಿಸಿ ಕುಳಿತಿರುವುದನ್ನು ನಾವು ಕಾಣಬಹುದು. ಇಂದು ನಮ್ಮ ದೇಶದ ಮುಂದಿರುವ ನೂರಾರು ಜಂಜಿಲ ಸಮಸ್ಯೆಗಳನ್ನರಿತೂ, ಇಡೀ ವಿಶ್ವವನ್ನು ನುಂಗಿರುವ ಹಲವಾರು ಸಮಸ್ಯೆಗಳೇ ನಮ್ಮನ್ನೂ ಕಾಡಿಸುತ್ತಿರುವವೇ ಹೊರತು ಅವು ಭಾರತದವೇ ಮಾತ್ರವಲ್ಲ ಎಂಬುದರ ಮನನವಿಕೆಯಾಗಿಯೂ ಅವರು ಇಲ್ಲದ ಸಲ್ಲದ ಉಸಾದೇಶ ಮಾಡಿ ಜನರನ್ನು ಅಡ್ಡ ದಾರಿಗೆ ಎಳೆಯುತಿದ್ದಾರೆ. ಎಂದರೆ ಮೇಲೆ ಹೇಳಿದ ಮೂಢಿನ ಸತ್ಯಸತ್ಯತೆಯ ಬಗ್ಗೆ ಮನವರಿಕೆಯಾಗಬಹುದು. ಇನ್ನು ದೇಶದಲ್ಲಿ ಒಂದು ವಿನಾಶಕಾರೀ ಸಂಘಟನೆಯನ್ನು ತಯಾರಿಸುತಿದ್ದಾರೆ. ಈ ರೀತಿ ವಿನಾಶಕಾರೀ ವಸ್ತುವಿನ ಮೇಲೆ ಕುಳಿತು ಅದಕ್ಕೇ ಬೆಂಕಿ ಕೊಟ್ಟು ಅದರ ಅಂದ ಚಂದವನ್ನು ನೋಡುತ್ತಿರುವ ಈ ಮಂದಿಗೆ ಕಾಲವೇ ಬುದ್ಧಿ ಕಲಿಸೀತು! ಆದರೆ ಅಂಥದ ಹಲವಾರು ಮಂದಿಯನ್ನು ಈ ಜನರು ಮುಂಗೈಗೆ ಬೆಲ್ಲ ಹಚ್ಚಿ ಈ ವಿನಾಶಕಾರೀ ಕೇಂದ್ರಗಳೆಡೆಗೆ ತಮ್ಮೊಡನೆ ಎಳೆದೊಯ್ಯುತ್ತಿರುವುದು ಮಾತ್ರ ಬಹಳ ವ್ಯಸನಾಸ್ಪದವಾದ ವಿಚಾರ.

ಸ್ವಾತಂತ್ರ್ಯವೆಂಬುದು ಮನಸ್ಸಿಗೆ ಮಾತ್ರ ಆರಿವಾಗಬಲ್ಲ ಒಂದು ಸ್ಥಿತಿ ವಿಶೇಷ ಹೊರತು ಇಂದ್ರಿಯಗಳಿಗೆ ಸುಖ ನೀಡಬಲ್ಲ ವಸ್ತು ವಿಶೇಷವಲ್ಲ. ಮುಂದೆ ಅದೇ ಬಾಹ್ಯ ಸುಖಗಳನ್ನು ಒದಗಿಸಿಕೊಡಬಲ್ಲ ಹಾದಿಯೂದೀತು ಆಷ್ಟೆ. ಆದರೆ ಇದನ್ನು ಎಷ್ಟು ಮುಂದಿ ತರಿತಿದ್ದಾರೆ? ತರಿತಿದ್ದರೆ ಇಂದು ದೇಶದಲ್ಲಿ ಏಳುವ ಇಲ್ಲಸಲ್ಲದ 'ಕೂಗು' 'ವಾದ'ಗಳಿಗೆ ಎಡೆಯಿದ್ದಿತೇನೆ? ಒಬ್ಬನು ಇನ್ನೊಬ್ಬನ ಆಡಿಯೂಳಾಗಿ ತಿಂಗಳಿಗೆ ನೂರು ರೂಪಾಯಿ ಪಡೆಯುತ್ತಾನೆ; ಮತ್ತೊಬ್ಬನು 'ಸ್ವತಂತ್ರನಾಗಿ ಬಾಳಿ ತಿಂಗಳಿಗೆ ಆರುವತ್ತು ರೂಪಾಯಿ ಸಂಪಾದಿಸುತ್ತಾನೆ ಎಂದು ಭಾವಿಸುವ. ಇವರಲ್ಲಿ ಮೊದಲನೆಯವನಿಗಿಂತಲೂ ಎರಡನೆಯವನೇ ಹೆಚ್ಚು ಸುಖಿಯಾಗುತ್ತಾನೆ. ಮೊದಲನೆಯವನಿಗೆ ರೂಪಾಯಿ ಹೆಚ್ಚು ದೊರಕುತಿದ್ದರೂ ಪಾರತಂತ್ರ್ಯದಲಿದ್ದುದರಿಂದ ಎರಡನೆಯವನಂತೆ ಶಾಂತಿಯೂಗಲೀ ಉತ್ಸಾಹವಾಗಲೀ ದೊರಕುವುದಿಲ್ಲ. ಇದನ್ನೇ ಸರ್ವಜ್ಞ "ಹೆಂಗಿನರಮನೆಗಿಂತ ವಿಂಗಡದ ಗುಡಿ ಲೇಸು" ಎಂದಿದ್ದಾನೆ. ಇದೇ ಸ್ಥಿತಿ ಒಂದು ದೇಶಕ್ಕೂ ಅನ್ವಯಿಸುತ್ತದೆ. ನಮಗೆ ಬ್ರಿಟಿಷರ ಗುಲಾಮರಾಗಿರುವ ಕಾಲಕ್ಕಿಂತ ಈಗ ಬಹಳ ಹೆಚ್ಚಿನ ಸೌಕರ್ಯಗಳೇನೂ ದೊರೆತಿಲ್ಲವಾದರೂ (ಅದು ಪರಿಸ್ಥಿತಿಯ ವಿಷಮತೆಯ ದೆಸೆಯಿಂದ ಎಂಬುದನ್ನು ಮರೆಯಲಾಗದು) ನಾವು ಸುಖಿಗಳಾಗಿದ್ದೇವೆ. ಅದು ನಾವು ಸ್ವತಂತ್ರರಾದುದರಿಂದಲೇ. ಒಂದು ಮೇಳೆ ಹೆಚ್ಚಿನ ಮುಂದಿಗೆ ಆ ಸುಖ ದೊರೆತಿಲ್ಲವಾದರೆ ಅದು ಆವರ ದಾಸ್ಯ ಮನೋವೃತ್ತಿಯ ದ್ಯೋತಕವಾಗಿದೆ ಅಷ್ಟೇ!

ಇಂದು ಹೆಚ್ಚಿನ ಮುಂದಿಯು ನಮ್ಮನವ ಓಟ ಒಂದು ವಿಚಿತ್ರ ಗತಿಯಲ್ಲಿ ಸಾಗಿರುತ್ತದೆ. ಹೆರವರ ತಪ್ಪೊಪ್ಪುಗಳನ್ನು ಹೆಕ್ಕಿ ವಿಮರ್ಶೆ ಮಾಡುವುದರಲ್ಲೇ ಕಾಲ ಕಳೆಯುತಿದ್ದಾರೆ. ಜನ ತನ್ನ ಬಾಳನ್ನೇ ವಿಮರ್ಶೆಗೆ ಗುರಿ ಮಾಡಿಕೊಳ್ಳುವ ಹವ್ಯಾಸ ಕಾಣಿಸುತಿದೆ. ಇಂದಿನ ಕೃತಕ ವಾತಾವರಣದಲ್ಲಿ ಬಾಳನ್ನು ಹಸನು ಮಾಡಿಕೊಳ್ಳುವ ಬುದ್ಧಿ ದಿವಾಳಿ ತೆಗೆದಿದೆ. ಹೆರವರ ಟೀಕೆಯೇ ಇಂದಿನ ಪ್ರವಚನ. ಕರ್ತವ್ಯಸ್ಫೂರ್ತಿಯುಗವು ಕಳೆದು ಹಕ್ಕು ಬಾಧ್ಯತೆಯ ಸೆಕ್ಟೋಟನ ಯುಗವು ತಲೆ ಹಾಕಿದೆ. ಇಂತಹ ಕಾಲದಲ್ಲಿ ಸ್ವಾತಂತ್ರ್ಯವೆಂದರೆ ತಮ್ಮ ಹಕ್ಕಿಗಾಗಿ (ಮಾತ್ರ) ಇನ್ನೂ ಹೆಚ್ಚಾಗಿ ಹೋರಾಡುವ ಅರ್ಹತೆ ಪಡೆಯುವುದು ಎಂದು ತಿಳಿದುಕೊಂಡಾರು ಜನ!

ಸ್ವಾತಂತ್ರ್ಯದ ನಿಜವಾದ ಜ್ಞಾನವುಳ್ಳ ವ್ಯಕ್ತಿಗಳ ಹೊಣೆ ಸ್ವತಂತ್ರರಾದ ಕೂಡಲೇ ಹೆಚ್ಚುತ್ತದೆ. ಅವರು ಇಂದು ದೇಶದ ಮುಂದಿರುವ ಜಟಿಲ ಸಮಸ್ಯೆಗಳಾದ ಆಹಾರದ ಅಭಾವ, ಆರ್ಥಿಕ ವಿಷಮತೆ, ಸಾಮಾಜಿಕ ಗೊಂದಲ, ಕಳ್ಳಸಂತೆ ಮತ್ತು ಇತರ ಜೀವನಾವಶ್ಯಕ ವಸ್ತುಗಳ ಕೊರತೆ ಇವುಗಳನ್ನು ಹೋಗಲಾಡಿಸಲು ಹೋರಾಡಬೇಕಾಗಿದೆ. ಇಂದಿನ ವಿಷಮ-ಪರಿಸ್ಥಿತಿಯ ನಿಜವಾದ ಕಾರಣವನ್ನು ಅರಿತುಕೊಂಡು ಜನತೆಗೆ ತಿಳುಹಿ ಅದನ್ನು ಕಳೆದೊಗೆಯಲು ದುಡಿಯಬೇಕಾಗಿದೆ. ನಾವು ಪ್ರತಿಯೊಂದಕ್ಕೂ ಸರಕಾರದ ಮೇಲೆ ಹೊಂದಿಕೊಂಡಿರುವುದೆಂದರೆ ಅದು ನಮ್ಮ ದೌರ್ಬಲ್ಯದ ದ್ಯೋತಕವಾಗಿದೆ. ಈ ದುರ್ದೈವೀ ಮನೋವೃತ್ತಿಯನ್ನು ಕಳೆದೊಗೆದು ಸ್ವಾವಲಂಬಿಗಳಾಗಿ ಬಾಳಲು ಕಲಿಯಬೇಕಾಗಿದೆ. ನಾವು ನಮ್ಮ ಜೀವನವನ್ನು ಮಹಾತ್ಮಗಾಂಧಿಯವರ ಈ ಕೆಳಗಿನ ಮಾತುಗಳಿಗೆ ಅನುಸಾರವಾಗಿ ರೂಪಿಸಿಕೊಂಡು ಭಾರತವನ್ನು ಅವರ ಕನಸಿನ ರಾಮರಾಜ್ಯವನ್ನಾಗಿ ಮಾಡಲು ಮನಸಾ ಸೆಣಸುವಾ. "ಭಾರತವಾಸಿಗಳು ಸ್ವರ್ಣ ರೂಪರಾದುದರಿಂದ ಒಂದು ಕಾಲದಲ್ಲಿ ಸ್ವರ್ಣಭೂಮಿ ಎಂದು ಹೆಸರುಗೊಂಡಿತ್ತು ಈ ಭಾರತಭೂಮಿ. ಭೂಮ್ಯಿಯೇನೋ ಇಂದೂ ಅದೇ. ಆದರೆ ಜನ ಬದಲಾಯಿಸಿದ್ದಾರೆ. ಅದ್ದರಿಂದ ಇಂದು ಭಾರತ ಭೂಮಿ ಹಾಳು ಬಿದ್ದಂತಿದೆ. ಅದನ್ನು ಮತ್ತೆ ಸ್ವರ್ಣ ಭೂಮಿಯನ್ನಾಗಿ ಮಾಡಲು ಸದ್ಗುಣಗಳ ಮೂಲಕ ನಮ್ಮನ್ನು ಸ್ವರ್ಣರೂಪರನ್ನಾಗಿ ಮಾಡಿಕೊಳ್ಳಬೇಕಾಗಿದೆ. ನಮ್ಮನ್ನು ಹೊನ್ನಾಗಿಸಬಲ್ಲ ಸ್ಪರ್ಶಮಣಿ ಅಕ್ಷರವೆರಡರಲ್ಲೇ ಅಡಗಿದೆ. ಅದೇ 'ಸತ್ಯ'. ಆದ್ದರಿಂದ ಪ್ರತಿಯೋರ್ವ ಭಾರತೀಯನೂ ಸತ್ಯವನ್ನು ತನ್ನ ಜೀವನದ ಉಸಿರಾಗಿ ಮಾಡಿಕೊಂಡರೆ ಭಾರತವು ಸುರಾಜ್ಯವಾದೀತು. ಈ ಮಾತಿನಂತೆ ನಮ್ಮ ಜೀವನವನ್ನು ರೂಪಿಸುವುದಾಗಿ ನಾವು ಭಾರತವು ಪ್ರಜಾರಾಜ್ಯವಾಗಿ ರೂಪುಗೊಳ್ಳುವ ಶುಭ ದಿನದಂದು ಪ್ರತಿಜ್ಞೆ ಮಾಡಿಕೊಳ್ಳುವಾ!

"ನವೆಯುಗ"

ಬಟ್ಟೆ ಬೇಕೆ?

ಮದುವೆ ಸಮಾರಂಭಗಳಿಗೆ ಬೇಕಾದ ನಾನಾ ರೀತಿಯ ಬೆಂಗಾಲ್ ಬೆನಾರಿಸ್ ಸಿಲ್ಕ್‌ಗಳು, ಸೇಲಂ, ಮಧುರಾ ಜವುಳಿಗಳು, ಉತ್ತಮ ಅಲಸನ್ ಬಟ್ಟೆಗಳು ಕಳೆದ ವರ್ಷದ ಬೆಲೆಗಿಂತಾ ೨೦% ರಷ್ಟು ಕಡಿಮೆ ದರದಲ್ಲಿ ದೊರೆಯುವವು.

ಅತ್ಯುತ್ತಮ ಮೂಡರಿಯಂ ಬೆನಾರಿಸ್ ಮತ್ತು ಕಾಶ್ಮೀರ್ ದಟ್ಟಿಗಳು ಸದಾ ದೊರೆಯುವವು

ನಾನೂರು ರೂಪಾಯಿಗಳಿಗೆ ಮೇಲ್ಪಟ್ಟ ಬಟ್ಟೆ ತೆಗೆಯುವವರು ಈ ಪತ್ರಿಕೆ ತಿಳಿಸಿದಲ್ಲಿ ಅವರವರ ಮನೆ ಬಾಗಿಲಿಗೆ ಬಂದು ಸರಬರಾಯಿ ಮಾಡಲಾಗುವದು.

ಒಮ್ಮೆ ಬಂದು ಪರೀಕ್ಷಿಸಿರಿ.

ವಲ್ಲಿ ಮೊಹಿದಿನ್ ಸಾಹೇಬ್ & ಬ್ರದರ್ಸ್,
ಸಿಲ್ಕ್ ಮತ್ತು ಕಾಟನ್ ವ್ಯಾಪಾರಿಗಳು,
ವೀರಾಜಪೇಟೆ (ಕೊಡಗು)

12–4

ಓದುಗರ ಓಲೆಗಳು.

'ಸ್ಟೇಟ್ ಬೇಂಕ್ನೆಟ್'

ತಾರೀಕು ೨೬-೧-೧೯೫೦ ರಂದು ಭಾರತವನ್ನು 'ರಿಪಬ್ಲಿಕ್' ಎಂದು ಸಾರಾಗುವದು. ಈ ದಿನವು ಭಾರತೀಯರಿಗೆ ಸಂತೋಷದ ದಿನವೇನೋ ಹೌದು. ಆದರೆ ಅಂಥಾ ದಿನದ ಸಂತೋಷದ ಸಮಯದಲ್ಲಿ ದೇಶದ ಪರಿಸ್ಥಿತಿಯನ್ನು ಮರೆತು ವರ್ತಿಸುವದು ಹಾನಿಕರ. ಆ ದಿನ ದೇಶದ ಉದ್ದಲಕ್ಕೂ ಔತಣ, ಉತ್ಸವಗಳ ಏರ್ಪಾಡಾಗಿದೆ. ಕೊಡಗಿನಂಥಾ ಚಿಕ್ಕ ಪ್ರಾಂತದಲ್ಲೂ ಸುಮಾರು ೫೦೦೦ ರೂಪಾಯಿಗಳಷ್ಟು ವೆಚ್ಚವಾಗಲಿದೆಯೆಂದು ವರ್ತಮಾನ. ಈ ರೀತಿಯ ದುಂದು ಗಾರಿಕೆ ಶೋಕಾಸ್ಪದವಾದುದು. ದೇಶದ ಇಂದಿನ ಆಹಾರ ಕೊರತೆಯ ಕಾಲದಲ್ಲಿ ಈ ರೀತಿಯ ಔತಣಗಳು ದ್ರೋಹಾತ್ಮಕವಾಗುವವು. 'ಹೆಚ್ಚು ಬೆಳೆಸಿ, ಕಡಿಮೆ ಬಳಸಿ, ಹೆಚ್ಚು ಉಳಿಸಿ' ಎಂದು ಪ್ರಚಾರ ಮಾಡುವ ಸರಕಾರವು ಕೊಡಗಿನಂಥಾ ಚಿಕ್ಕ ದೇಶದಲ್ಲಿ ೭೦೦ "ಸಭ್ಯ"ರನ್ನು ಕರೆಸಿ ಊಟ ಏರ್ಪಡಿಸಿದರೆ ಸಾಮಾನ್ಯ ಜನರ ಮೇಲೆ ಇದರ ಪರಿಣಾಮ ಹೇಗಾಗುವದು? ಈ ಔತಣಕ್ಕೆ ಜನರನ್ನು ಆಹ್ವಾನಿಸಿದುದಾದರೂ ಯಾವ ತತ್ವದಿಂದ? ದುಡಿಯುವವರೆಂದೇ? ಇಲ್ಲವೇ ಯಾರ ಪ್ರತಿನಿಧಿಗಳೆಂದು? ಬಡಜನರ ಹಣವನ್ನು ಸುಲಿಸಿ ಈ ರೀತಿ ದುರ್ವ್ಯಯ ಮಾಡುವದು ಜನತೆಯ ದೃಷ್ಟಿಯಲ್ಲಿ ಅಕ್ಷಮ್ಯ ಅಪರಾಧ 'ರಿಪಬ್ಲಿಕ್' ದಿನದಂಥಾ ಸಂತೋಷ ಸಂದರ್ಭದಲ್ಲಿ ಜನತೆ ಉತ್ಸವ ನಡೆಸಲಿ. ಆದರೆ ಈ ರೀತಿಯ 'ಮುಂಡಾಸು ನೋಡಿ ಮನೆ ಹಾಕುವ' ಹಿಂದಿನ ಕಾಲದ ಪದ್ಧತಿ, ಹೊಟ್ಟೆಗಿಲ್ಲದವರ ಮಧ್ಯೆ ಈ ರೀತಿಯ ಅನೈತಿಕ ಔತಣಗಳು ಸ್ವತಂತ್ರ ದೇಶದಲ್ಲಿ ಜವಾಬ್ದಾರಿ ಸರಕಾರಗಳಿಂದ ಮಾಡಲ್ಪಡಬಾರದು. ಸರಕಾರವು ಜನತೆಗೆ ಜವಾಬ್ದಾರವಾಗಿಲ್ಲದುದೇ ಈ ರೀತಿಯ ಹಳೇ ಸಂಪ್ರದಾಯವನ್ನು ಹಿಡಿದು ವರ್ತಿಸುವ ಪರಂಪರೆಗೆ ಕಾರಣವಿರಬಹುದು. ಈ ನ್ಯೂನತೆಯನ್ನು ಸರಿಪಡಿಸಲು ಈ ಸರಕಾರಕ್ಕೆ ಹೇಳಿ ಪ್ರಯೋಜನವಿಲ್ಲವೆಂದು ನನಗೆ ಗೊತ್ತು. ಈ ಸರಕಾರದ ವರ್ತನೆಯನ್ನು ಜನತೆ ಗಮನಿಸಬೇಕೆಂಬುದೇ ನನ್ನ ಈ ಪತ್ರದ ಉದ್ದೇಶ.

'ನಿರೀಕ್ಷಕ'

ವಿದ್ಯಾ ಇಲಾಖೆಯಲ್ಲಿ ಸೂಪರ್ ವೈಜರ ಆಯ್ಕೆ.

ಪ್ರೈಮರಿ ಶಾಲೆಗಳ ಮೇಲ್ವಿಚಾರಣೆಗಾಗಿ ವಿದ್ಯಾ ಇಲಾಖೆಯಲ್ಲಿ ಸೂಪರ್ ವೈಜರೊಬ್ಬರನ್ನು ನೇಮಕ ಮಾಡಲಾಗಿದೆ ಎಂದು ತಿಳಿಯಬಂತು. ಕೊಡಗು ಕಾಲ್ಸೆಲಿನಲ್ಲಿ ಅಸಿಸ್ಟೆಂಟ್ ಎಡ್ಯುಕೇಶನಲ್ ಆಫೀಸರೊಬ್ಬರನ್ನು ನಿಯಮಿಸಬೇಕೆಂದು ಸರ್ವಾನುಮತದಿಂದ ಪಾಸಾಗಿದ್ದರೂ ಕೂಡ, ಕೊಡಗು ಸರಕಾರವು ಹಣ ಪೋಲು ಮಾಡಬೇಕೆಂಬ ಅಭಿಪ್ರಾಯದಿಂದ ಸೆಕಂಡರ್ ಗ್ರೇಡ್ ಸಂಬಳದ ಸೂಪರ್ ವೈಜರೊಬ್ಬರನ್ನು ನೇಮಿಸಿದ್ದು ವಿದ್ಯಾ ಪ್ರಗತಿಯಲ್ಲಿ ಸಮಂಜಸವಾಗಿ ಕಂಡು ಬರುವುದಿಲ್ಲ. ಡಿಸ್ಟ್ರಿಕ್ಟ್ ಎಡ್ಯುಕೇಶನಲ್ ಆಫೀಸರು ಎಲ್ಲಾ ಹೈಸ್ಕೂಲುಗಳ, ಅಸಿಸ್ಟೆಂಟ್ ಎಡ್ಯುಕೇಶನಲ್ ಆಫೀಸರು ಎಲ್ಲಾ ಹೈಯರ್ ಎಲಿಮೆಂಟ್ ಶಾಲೆಗಳ ಸೂಪರ್ ವೈಜರ, ಕೊಡಗಿನ ಎಲ್ಲಾ ಡಿ. ಬಿ. ಪ್ರೈಮರಿ ಶಾಲೆಗಳ ಮೇಲ್ವಿಚಾರಣೆ ಮಾಡುವದೆಂದು ವದಂತಿ. ಆದ್ದರಿಂದ ಸೂಪರ್ ವೈಜರ ಹುದ್ದೆಗೆ ಜಿಲ್ಲಾಬೋರ್ಡಿನ ಯೋಗ್ಯರೊಬ್ಬರನ್ನೇ ನೇಮಕ ಮಾಡಬೇಕಿತ್ತು. ಇದು ಬಿಟ್ಟು ಸರಕಾರಿ ಶಾಲೆಯ ಉಪಾಧ್ಯಾಯರೊಬ್ಬರನ್ನು ಚುನಾಯಿಸಿದ ವರ್ತನೆಯು ಜನತೆಯಲ್ಲಿಯೂ, ಡಿ. ಬಿ. ಉಪಾಧ್ಯಾಯ ವೃಂದದಲ್ಲಿಯೂ ಅತೃಪ್ತಿಯನ್ನುಂಟು ಮಾಡಿದೆ. ಡಿ. ಬಿ. ಶಾಲೆಗಳಲ್ಲಿ ಈಗ ನೇಮಿಸಿದ ಸೂಪರ್‌ವೈಜರಷ್ಟೇ ತರಬೇತು ಹೊಂದಿದವರೂ ಅವರಿಗಿಂತಲೂ ಹೆಚ್ಚಿನ ತರಬೇತನ್ನೂ ವಿದ್ಯೆಯನ್ನೂ ಗಳಿಸಿ ಸರ್ವಿಸ್ಸಾದ ಹಲವಾರು ಉಪಾಧ್ಯಾಯರಿರುವಲ್ಲಿ ಅವರ ಪೈಕಿ ಒಬ್ಬರನ್ನು ಸೂಪರ್ ವೈಜರಾಗಿ ಚುನಾಯಿಸಿ ಡಿ. ಬಿ. ಶಾಲೆಗಳ ಉಪಾಧ್ಯಾಯರನ್ನು ಪ್ರೋತ್ಸಾಹಿಸುವುದು ಡಿಸ್ಟ್ರಿಕ್ಟ್ ಎಡ್ಯುಕೇಶನಲ್ ಆಫೀಸರಿಗೆ ವಿಹಿತವಾಗಿತ್ತು. ಬಹುಶಃ ಪ್ರಾಥಮಿಕ ಶಿಕ್ಷಣದ ತಿರುಳನ್ನರಿಯದವರೊಬ್ಬನನ್ನು ಚುನಾಯಿಸಿದ ಬಗೆಯನ್ನು ನೋಡಿದರೆ ವ್ಯಸನ ಪಡಬೇಕಾಗುತ್ತದೆ.

ಈ ಬಗೆಯ ಸೂಪರ್‌ವೈಜರ ಚುನಾವಣೆಯನ್ನು ರದ್ದುಗೊಳಿಸಿ ಕೌನ್ಸಿಲಿನಲ್ಲಿ ಪಾಸಾದ ಮೇರೆ ಉತ್ತರ ಮತ್ತು ದಕ್ಷಿಣ ಕೊಡಗಿಗೆ ಒಬ್ಬೊಬ್ಬ ಅಸಿಸ್ಟೆಂಟ್ ಎಡ್ಯುಕೇಶನ್ ಆಫೀಸರನ್ನು ನೇಮಕಮಾಡಿ ವಿದ್ಯಾ ಇಲಾಖೆಯ ಗೌರವವನ್ನೂ ಶ್ರೇಯಸ್ಸನ್ನೂ ಕಾಪಾಡಬೇಕೆಂದು ಸರಕಾರದವರಲ್ಲಿ ನನ್ನ ವಿನಂತಿ. ಇದನ್ನು ಸದ್ಯೆ ಜಾರಿಗೆ ತರಲುಸಾಧ್ಯವಿಲ್ಲದಿದ್ದರೆ ಡಿ. ಬಿ. ಉಪಾಧ್ಯಾಯರ ಮೇಲ್ಮೆಯನ್ನು ಬಯಸಿ ಶಿಕ್ಷಣ ವೃತ್ತಿಯಲ್ಲಿ ನುರಿತ ಡಿ. ಬಿ. ಉಪಾಧ್ಯಾಯರಲ್ಲೊಬ್ಬರನ್ನು ಸೂಪರ್‌ವೈಜರಾಗಿ ನೇಮಿಸಬೇಕೆಂದು ಡಿಸ್ಟ್ರಿಕ್ಟ್ ಎಡ್ಯುಕೇಶನಲ್ ಆಫೀಸರಲ್ಲಿ ನವ್ರ ಕೋರಿಕೆ.

ವಿದ್ಯಾಪ್ರೇಮಿ.

ತಿಳಿದವರು ಹೇಳಬಲ್ಲಿರಾ?

ಸ್ವತಂತ್ರ ಹಿಂದೂದೇಶದ ಆರ್ಥಿಕ ಮತ್ತು ಆಹಾರ ಪರಿಸ್ಥಿತಿಗಳು ತೀರಾ ತೊಡಕಿನಲ್ಲಿರುವುದರಿಂದ, ಅವುಗಳನ್ನು ಸುಧಾರಿಸುವ ಸಲುವಾಗಿ ನಮ್ಮ ಸರಕಾರವು ಅನೇಕ ಉದ್ಯಮಗಳನ್ನು ಕೈಗೊಂಡಿದೆಯಷ್ಟೆ. ಅವುಗಳಲ್ಲಿ 'ಹೆಚ್ಚು ಬೆಳೆಯಿರಿ, ಖರ್ಚು ಕಡಿಮೆ ಮಾಡಿರಿ ಸಂಭ್ರಮದ ಔತಣಗಳನ್ನು ಕಡಿಮೆ ಮಾಡಿರಿ," 'ವಸ್ತುಕ್ಕೊಂದು ಹೊತ್ತು ಊಟವನ್ನು ತೊರೆಯಿರಿ' ಎಂಬ ಪ್ರಚಾರಗಳು ಬಹಳ ಜೋರಾಗಿ ನಡೆಯುತ್ತಿವೆಯೆನ್ನಬಹುದು. ಆದರೆ ಕೇಂದ್ರ ಸರಕಾರದ ಈ ಪ್ರಚಾರಗಳನ್ನು ಸ್ಥಳೀಯ ಅಥವಾ ಪ್ರಾಂತೀಕ ಸರಕಾರಗಳು ಆಚರಣೆಯಲ್ಲಿ ತಂದು ತಕ್ಕ ಕಾರ್ಯಕ್ರಮಗಳನ್ನು ಕೈಗೊಂಡಿರುವವೋ? ಈ ಕಾರ್ಯದಲ್ಲಿ ಅವುಗಳು ಎಷ್ಟರ ಮಟ್ಟಿಗೆ ಜಯವನ್ನು ಹೊಂದಿವೆ? ತಿಳಿದವರು ಹೇಳಬಲ್ಲಿರಾ?

'ಖರ್ಚು ಕಡಿಮೆ ಮಾಡಿರಿ', 'ಸಂಭ್ರಮದ ಔತಣಗಳನ್ನು ಕಡಿಮೆ ಮಾಡಿರಿ', ಎಂದು ಮೊದಲಾಗಿ ಸರಕಾರವು ಕೂಗಿದರೆ, ಇತ್ತ ದೇಶಗಳಲ್ಲಿ ಅಲ್ಲಲ್ಲಿ 'ಸಂಭ್ರಮದ ಔತಣಗಳೂ, ಖರ್ಚಿನ ಪ್ರಮಾಣವೂ' ಹೆಚ್ಚುತ್ತಿರುವಂತೆಯೇ ಕಂಡು ಬರುತ್ತಿದೆ. ಉದಾಹರಣೆಗೆ ಕೊಡಗಿಗೆ ಈಗಾಗಲೇ ಬಂದು ಹೋಗಿರುವ ಅನೇಕ ಮಹನೀಯರುಗಳಲ್ಲಿ ಒಬ್ಬನಾದರೂ ಒಂದು ಚಾಕೂಟವನ್ನಾಗಲೀ, ಔತಣವನ್ನಾಗಲೀ ಸ್ವೀಕರಿಸದೆ ಹೋದ ಉದಾಹರಣೆ ಇಲ್ಲ. 'ಸಂಭ್ರಮದ ಔತಣಗಳನ್ನು ಕಡಿಮೆ ಮಾಡಿರಿ' ಎಂದು ಸರಕಾರವು ಸಾರುತ್ತಿರುವಾಗ, ಕೊಡಗಿನ ಸರಕಾರಕ್ಕೆ ಈ ಸಾರಿಕೆಯು ಅನ್ವಯಿಸುವುದಿಲ್ಲವೇ? ಅದಕ್ಕಿಂತಲೂ ವಿಶೇಷವೇನೆಂದರೆ—ನಿಶಾ ಸೇವನೆಯನ್ನು ನಿರ್ಮೂಲ ಮಾಡಲು ಪಣತೊಟ್ಟ, ಗಾಂಧೀ ಅನುಯಾಯಿಯಾದ ಕಾಂಗ್ರೆಸ್ಸ್ ಸರಕಾರವೇ ಕುಡಿಯುವ ಹವ್ಯಾಸವುಳ್ಳವರೆಂದಂದುಕೊಂಡು, ಕೊಡಗಿಗೆ ಬಂದ ಮಹನೀಯರುಗಳಲ್ಲಿ ಒಬ್ಬಿಬ್ಬರಿಗೆ 'ಬೀರ್' ಮುಂತಾದ ಮದ್ಯ ಪಾನಗಳನ್ನು ಕೊಟ್ಟು ಉಪಚರಿಸಿದ ಉದಾಹರಣೆಗಳೂ ಇವೆಯಂತೆ! ಹಾಗಾದರೆ, ದೇಶದಲ್ಲಿ ನಿಶಾಸೇವನೆಯನ್ನು ನಿರ್ಮೂಲನ ಮಾಡಬೇಕೆಂದು ಸರಕಾರವು ಪ್ರಯತ್ನಿಸುತ್ತಿರುವುದು ಬರಿಯ ಸೋಗುಮಾತ್ರವಲ್ಲದ ಮತ್ತೇನು? ಇಂದು ಮದ್ಯಪಾನೀಯಗಳನ್ನು ಬೇಕಾದಷ್ಟು ಪ್ರಮಾಣದಲ್ಲಿ ಪಡೆದುಕೊಳ್ಳಲು, ಬಡವೈತರಿಗೆ ಮಾತ್ರ ಕಷ್ಟವಲ್ಲದೆ ಇತರರಿಗೆ ಕಷ್ಟವಿಲ್ಲ. ಪರಿಸ್ಥಿತಿಯು ಇಂತಿರುವಾಗ ನಿಶಾಸೇವೇಧ ಕಾರ್ಯವು ಸಾಧ್ಯವಿದೆಯೇ?

ಆಂಗ್ಲೇಯರ ಆಡಳಿತದ ಕಾಲದಲ್ಲಿ ಕಂಡುಬರುತ್ತಿದ್ದ ಬಲ್ಲಿದ ಬಡವರೆಂಬ, ಮೇಲು ಕೀಳೆಂಬ ಭೇದಭಾವಗಳು, ಸ್ವತಂತ್ರವಾದ ಈ ದೇಶದಲ್ಲಿ ಕಡಿಮೆಯಾಗುವುದರ ಬದಲು, ಹೆಚ್ಚುತ್ತಿರುವಂತೆ ತೋರಿಬರುತ್ತಿದೆ! ಪರ ಪ್ರಾಂತಗಳಿಂದ ಮತ್ತು ಪರದೇಶಗಳಿಂದ ಕೊಡಗಿಗೆ ಬರುವ ಮಹನೀಯರುಗಳನ್ನು ನೋಡಿಕೊಳ್ಳಲು ಇಲ್ಲಿಯ ಬಡ ಮತ್ತು ಮಧ್ಯ ತರಗತಿಯ ಪ್ರಜೆಗಳಿಗೆ ಸಾಧ್ಯವಿಲ್ಲ. ಹಲಕೆಲವರು ತಾವೇ ಚಂದಾ ವಸೂಲುಮಾಡಿ, ತಮ್ಮ ಬರುವ ಅತಿಥಿಗಳನ್ನು ಸತ್ಕರಿಸಿ ತಾವೇ ಅವರ ನುಡಿಗಳನ್ನು ಕೇಳಿ, ತಾವೇ ಬೀಳ್ಕೊಟ್ಟು ಕಳುಹಿಸುತ್ತಿದ್ದಾರೆ! ಇದು ಎಲ್ಲಿಯ ನ್ಯಾಯ! ಇದು ಸ್ವತಂತ್ರ ದೇಶದ ನಾಗರಿಕ ಪ್ರಜೆಗಳ ರೀತಿಯೇ? ಸ್ವತಂತ್ರ ದೇಶದಲ್ಲಿಯೂ ಕೂಡ ಬಡ ಪ್ರಜೆಗಳಿಗೆ ಸ್ಥಾನವಿಲ್ಲದಾಯಿತೇ? ಹಿಂದೂ, ಮುಸಲ್ಮಾನರೆಂಬ ಜಾತಿ ಭೇಧದ ಬದಲು ಆರ್ಥಿಕ ಪರಿಸ್ಥಿತಿಗನುಸರಿಸಿ 'ಆರ್ಥಿಕ ಜಾತಿಭೇಧ'ವೊಂದು ತಲೆಯೆತ್ತುತ್ತಿರುವಂತೆ ಕಂಡುಬರುತ್ತಿದೆ! ಇದು ನಿಲ್ಲಬೇಕು. ಇಂದಿನ ಅನೇಕ ಬಡವರು ಮತ್ತು ಮಧ್ಯ ತರಗತಿಯವರು ಆರ್ಥಿಕ ಸ್ಥಿತಿಯಲ್ಲಿ ಮಾತ್ರ ಬಡವರಲ್ಲದೆ, ನೈತಿಕ, ರಾಜಕೀಯ, ಹಾಗೂ ಸಾಮಾಜಿಕ ವಿಷಯಗಳಲ್ಲಿ ಬಡವರಲ್ಲ. ಆದುದರಿಂದ ಇನ್ನು ಮುಂದಾದರೂ ಇಂತಹ ವರ್ತನೆಗಳು ಕೂಡದು.

ಸಾರ್ವಜನಿಕ ಸಭೆಗಳು.

ಗೋಣಿಕೊಪ್ಪ.

ತಾರೀಕು ೨೨-೧-೧೯೫೦ ರಲ್ಲಿ ಇಲ್ಲಿಯ ಆಸ್ಪತ್ರೆಯ ಮುಂದುಗಡೆ ಮೈದಾನದಲ್ಲಿ ಒಂದು ಸಾರ್ವಜನಿಕ ಸಭೆಯು ನಡೆಯಿತು. ಶ್ರೀ. ಎ. ಎಸ್. ಪೊನ್ನಪ್ಪನವರು ಅಧ್ಯಕ್ಷರಾಗಿದ್ದರು. ಶ್ರೀಗಳಾದ ಪಿ. ಐ. ಬೆಳ್ಯಪ್ಪ, ಕೆ. ಟಿ. ಉತ್ತಪ್ಪ ಮತ್ತು ಕೆ. ಪಿ. ಕರುಂಬಯ್ಯ ಇವರುಗಳು ಕಂದಾಯ ಏರಿಸುವ ಮಸೂದೆಗೂ ಕೊಡಗಿನ ಭವಿಷ್ಯಕ್ಕೂ ಇರುವ ಸಂಬಂಧವನ್ನು ವಿವರಿಸಿ ಕೌನ್ಸಿಲಿನ ಹೊಸ ಚುನಾವಣೆಯಾಗುವ ವರೆಗೆ ಸಮರಿ ಸೆಟ್ಲ್‌ಮೆಂಟ್ ಮಸೂದೆಯನ್ನು ಮುಂದರಿಸಬೇಕಾಗಿ ಇದು ಸಾಧ್ಯವಿಲ್ಲದಿದ್ದರೆ ಜನಾಭಿಪ್ರಾಯ ತೆಗೆದು ಮಸೂದೆಯಲ್ಲಿಯ ಕಂದಾಯ ದರವನ್ನು ಇಳಿಸಲು ಇದನ್ನು ಒಂದು ಸಿಲೆಕ್ಟ್ ಕಮಿಟಿಗೆ ಬಿಡುವದು ಯುಕ್ತವೆಂದು ವಿವರಿಸಿ ಭಾಷಣ ಮಾಡಿದರು. ಶ್ರೀಗಳಾದ ಎನ್. ಸೋಮಣ್ಣ ಮತ್ತು ಬಿ. ಕೆ. ನಂಜುಂಡೇಶ್ವರ ಇವರುಗಳು ಸಮರಿ ಸೆಟ್ಲ್‌ಮೆಂಟ್ ಮಸೂದೆಯನ್ನು ಪೂರ್ಣ ವಿರೋಧಿಸಬೇಕೆಂದು ಮಾತಾಡಿದರು. ಭಾಷಣ ಮಾಡುತ್ತಿರುವಾಗಲೂ ಠರಾವುಗಳನ್ನು ಓಟಿಗೆ ಹಾಕುವಾಗಲೂ ಎರಡು ಪಕ್ಷದವರಲ್ಲಿ ಸ್ವಲ್ಪ ಗಲಿಬಿಲಿಯುಂಟಾಯಿತು. ಕಡೆಗೆ ಈ ಕೆಳಗಿನ ಠರಾವುಗಳು ಬಹುಮತದಿಂದ ಪಾಸಾದವು.

(೧) ಅವಧಿ ಮುಗಿದಿರುವ ಈಗಿನ ಕೌನ್ಸಿಲಿಗೆ ಹೊಸ ಚುನಾವಣೆಯನ್ನು ಶೀಘ್ರದಲ್ಲೇ ನಡೆಸಬೇಕೆಂದು ಈ ಸಭೆಯು ಸರಕಾರವನ್ನು ಕೇಳಿಕೊಳ್ಳುತ್ತದೆ.'

(೨) 'ಸಮರಿ ಸೆಟ್ಲ್‌ಮೆಂಟಿನ ಮಸೂದೆಯನ್ನು ಕೌನ್ಸಿಲಿನ ಹೊಸ ಚುನಾವಣೆಯಾಗುವ ವರೆಗೆ ಮುಂದರಿಸಬೇಕೆಂದೂ ಇದು ಸಾಧ್ಯವಿಲ್ಲದಿದ್ದರೆ ಸದರಿ ಮಸೂದೆಯನ್ನು ಜನಾಭಿಪ್ರಾಯ ತೆಗೆದು ಕಂದಾಯದ ದರವನ್ನು ಕಡಿಮೆ ಮಾಡುವ ತಿದ್ದುಪಡಿ ಮಾಡುವ ಬಗ್ಗೆ ಇದನ್ನು ಒಂದು ಸಿಲೆಕ್ಟ್ ಕಮಿಟಿಗೆ ಬಿಡಬೇಕೆಂದೂ ಈ ಸಭೆಯು ಸರಕಾರವನ್ನು ಮತ್ತು ಕೌನ್ಸಿಲು ಸದಸ್ಯರನ್ನು ಕೇಳಿಕೊಳ್ಳುತ್ತದೆ.

ಹುದಿಕೇರಿ.

ತಾರೀಕು ೨೩ ರಲ್ಲಿ ಹುದಿಕೇರಿಯಲ್ಲಿ ಜಿಲ್ಲಾ ಬೋರ್ಡ್ ಪ್ರೆಸಿಡೆಂಟರಾದ ಶ್ರೀ. ಐನಂಡ ಕಾರ್ಯಪ್ಪನವರ ಅಧ್ಯಕ್ಷತೆಯಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲೂ ಮೇಲಿನ ಅರ್ಥದ ಠರಾವುಗಳು ಸರ್ವಸಮ್ಮತದಿಂದ ಪಾಸಾದವು.

ಕಾಕೂರು.

ತಾರೀಕು ೨೦ ರಲ್ಲಿ ಕಾಕೂರಿನಲ್ಲಿ ಒಂದು ಸಾರ್ವಜನಿಕ ಸಭೆಯು ಮಿ. ಮೂರಿಸ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಮರಿ ಸೆಟ್ಲ್‌ಮೆಂಟಿನ ಮಸೂದೆಯನ್ನು ಕೂಲಂಕಷ ಚರ್ಚೆ ನಡೆದ ನಂತರ ಕೊಡಗಿನ ಸರಕಾರದ ಆರ್ಥಿಕ ಸ್ಥಿತಿಯನ್ನು ಮತ್ತು ಸಮರಿ ಸೆಟ್ಲ್‌ಮೆಂಟ್ ಮಸೂದೆಯನ್ನು ಪರ್ಯಾಲೋಚಿಸಲು ಒಂದು ಸಮಿತಿಯನ್ನು ನೇಮಿಸಬೇಕೆಂಬ ಠರಾವು ಪಾಸಾ

ಕೊಡಗು

ತಾ. ೨೭-೧-೧೯೫೦ನೇ ಶುಕ್ರವಾರ

ರಿಪಬ್ಲಿಕ್ ಭಾರತ.

೧೯೫೦ ರಿಂದಲೇ ಜನವರಿ ತಾರೀಕು ೨೬ಕ್ಕೆ ಒಂದು ಘನತೆ ಬಂದಿದೆ. ಭರತ ಖಂಡವು ಪೂರ್ಣ ಸ್ವಾತಂತ್ರ್ಯವನ್ನು ಪಡೆಯುವದೇ ಗುರಿಯೆಂದು ೨೦ ವರ್ಷಗಳ ಹಿಂದೆ ಜನವರಿ ೨೬ ರಲ್ಲಿ ರವಿ ನದೀತೀರದಲ್ಲಿ ತ್ರಿವರ್ಣ ಧ್ವಜವನ್ನು ಏರಿಸಿ ಪ್ರತಿಜ್ಞೆಯನ್ನು ಕೈಕೊಂಡುದಾಯಿತು. ಅಂದಿನಿಂದ ಪ್ರತಿ ಜನವರಿ ತಾರೀಕು ೨೬ ಭಾರತದ ಸ್ವಾತಂತ್ರ್ಯ ದಿನ. ಭಾರತ ಸ್ವಾತಂತ್ರ್ಯ ದಿನಾಚರಣೆ ಎಂದರೆ ಅಂದು ಗಂಡಾಂತರದ ಪ್ರಸಂಗ. ತ್ರಿವರ್ಣ ಧ್ವಜಹಾರಿಸಿದರೆ ಆದು ಸರಕಾರಕ್ಕೆ ವಿರುದ್ಧ. ಪೂರ್ಣ ಸ್ವಾತಂತ್ರ್ಯವೇ ನಮ್ಮ ಗುರಿ ಎಂದಾಗ ಅದು ರಾಜದ್ರೋಹವೆಂದು ಪರಿಗಣಿಸಲ್ಪಡುತ್ತಿತ್ತು. ಆದ್ದರಿಂದ ಪ್ರತಿ ಜನವರಿ ೨೬ ರಂದು ಜನತೆಯು ದಸ್ತಗಿರಿ, ಲಾಠಿ ಏಟು ನಡೆದು ಬರುತಿತ್ತು. ಆದರೂ ಭಾರತೀಯರು ತಮ್ಮ ದೃಢ ಪಥದಿಂದ ಹಿಂಜರಿಯಲಿಲ್ಲ. ಪೂರ್ಣ ಸ್ವಾತಂತ್ರ್ಯದ ಸಾಧನೆಗಾಗಿ ತನ್ನು ಸುಖಭೋಗಗಳನ್ನು ತೊರೆದರು. ಸ್ವಾರ್ಥ ಸಂಕೀರ್ಣತೆಗಳನ್ನು ಬದಿಗೊತ್ತಿದರು. ಜೈಲು ಜೀವನವನ್ನು ಆರಾಧ್ಯ ಜೀವನವೆಂಬಂತೆ ಸ್ವಾಗತಿಸಿದರು. ತಮ್ಮ ಕೆಣ್ಣೀರ ಓಕುಳಿಯನ್ನು ಜೆಲ್ಲಿ ಪಡಬಾರದ ಕಷ್ಟ, ಸಹಿಸಲಾರದ ಅವಮಾನವನ್ನು ಸಹಿಸಿದರು. ಎಲ್ಲಕ್ಕೂ ಅಮೂಲ್ಯವಾದ ಪ್ರಾಣವನ್ನೇ ಪಣವಾಗಿ ಒಪ್ಪಿಸಿದರು. ದಾರಿಯಲ್ಲಿ ಒದಗಿದ ಈ ಆಡ್ಡಿ ಆತಂಕಗಳನ್ನು ಲೆಕ್ಕಿಸದೆ ಭಾರತೀಯರು ಪೂರ್ಣ ಸ್ವಾತಂತ್ರ್ಯದ ದಿನ್ಯ ಜೆಳಕಿನತ್ತ ತದೇಕ ದೃಷ್ಟಿಯಿಂದ ಸಾಗಿದರು. ಯಾವ ಲಾಠಿಯು ಮಳೆಯೂ, ಗುಂಡಿನ ಗುಡುಗೂ ಅವರನ್ನು ಪಥಗೆಡಿಸಲಾರದಾಯಿತು. ಯುಗಪುರುಷ ಬಾಪು ತನ್ನ ಬಿಚ್ಚಿದೆಯನ್ನು ಮುಂದಿರಿಸಿ ಸಾಗಿದರು. ಭಾರತೀಯರು ಹಿಂಬಾಲಿಸಿದರು. ಈ ಧೃಢ ಪ್ರತಿಜ್ಞೆಯ ಎದುರು ಸಾಮ್ರಾಜ್ಯ ಶಾಹಿಯು ಕಪಿಮುಷ್ಟಿ ಸಡಲಿ ಭಾರತೀಯರ ಈ ಮಹಾಪ್ರವಾಹಕ್ಕೆ ದಾರಿ ಮಾಡಬೇಕಾಯಿತು. ಭರತ ಖಂಡವು ೧೯೪೭ನೇ ಆಗಷ್ಟ್ ೧೫ ರಂದು ಸ್ವಾತಂತ್ರ್ಯ ಗುರಿಯನ್ನು ಮುಟ್ಟಿತು. ಭಾರತೀಯರ ಮಹಾತಪಸ್ಸಿಗೆ ಜಯವಾಯಿತು!

ಸ್ವಾತಂತ್ರ್ಯ ದೊರೆತು ಇಂದಿಗೆ ಎರಡೂವರೆ ವರ್ಷವಾಯಿತು. ಸ್ವತಂತ್ರ ಭಾರತದ ಜನವರಿಯನ್ನು ಭಾರತೀಯ ಮುಂದಾಳುಗಳು ವಹಿಸಿ ಹದಗೆಟ್ಟ ಭಾರತ ಭವನವನ್ನು ಸರಿಪಡಿಸುತ್ತಿದ್ದಾರೆ. ಕಾಲವೆ ಪರಿಸ್ಥಿತಿಯಿಂದಾಗಿ, ಘಟನೆಗಳ ಒತ್ತಡದಿಂದಾಗಿ, ಸಮಸ್ಯೆಗಳ ಜಠಿಲತೆಯಿಂದಾಗಿ ವಾಡಲು ಆತೆ ಇನ್ನಷ್ಟು ಆವರಿಂದ ಸಾಧಿಸಲಾಗಲಿಲ್ಲ. ಆದಕ್ಕಾಗಿ ಇಂದಿನ ಸರಕಾರವನ್ನು ಹಲವರು ದೂಷಿಸುತ್ತಾರೆ. ಸರಕಾರದಲ್ಲಿ ನ್ಯೂನತೆ ಇರಬಹುದು. ಆದರೆ ಯಾವ ಸರಕಾರವೂ ಇವಕ್ಕಿಂತಾ ಉತ್ಸಮವಾಗಿ ಭಾರತದ ಬೃಹದ್ ಸಮಸ್ಯೆಗಳನ್ನು ಎದುರಿಸುತ್ತಿರಲಿಲ್ಲವೆಂದು ಸಂಕೋಚವಿಲ್ಲದೆ ಹೇಳಬಹುದು. ಭರತ ಖಂಡದ ಖ್ಯಾತಿ ಅಂತರಾಷ್ಟ್ರೀಯ ರಂಗದಲ್ಲಿ ಬಹು ಮೇಲೇರಿದೆ. ಇದಕ್ಕೆ ಪಂಡಿತ ಜವಾಹರರೇ ಕಾರಣ.

ಇಂದು ಭರತಖಂಡವು ಸರ್ವ ಸ್ವತಂತ್ರ ದೇಶ. ಯಾವದೇ ನೀತಿ, ರೀತಿಯನ್ನು ರೂಪಿಸಿಕೊಳ್ಳಲು ಯಾವ ಅಡ್ಡಿ ಆತಂಕವಿಲ್ಲ. ಅದು ತನ್ನದೇ ಆದ ರಾಜ್ಯಘಟನೆಯ ಮಾಡಿಕೊಂಡಿದೆ. ತನ್ನ ಪುತ್ರನೊಬ್ಬನನ್ನೇ ಅಧ್ಯಕ್ಷನನ್ನಾಗಿ ಆರಿಸಿದೆ. ಇಂದು ಬೆಟನು ಎಷ್ಟು ಸ್ವತಂತ್ರವೋ ಅಷ್ಟೇ ಭಾರತವೂ ಕೂಡ. ವಿವಿಧ ರಾಷ್ಟ್ರಗಳ ಸಂಕೋಲೆಯಲ್ಲಿ ಬಂಧಿತವಾಗಿದ್ದ ಭಾರತವು ಆ ಸಂಕೋಲೆಗಳನ್ನು ಕಡಿದುಕೊಂಡು ನಿಭಾಗಧಕವಾಗಿ ಜಗತ್ತಿನ ಸ್ವತಂತ್ರ ರಾಷ್ಟ್ರಗಳ ಪಂಗ್ತಿಯಲ್ಲಿ ತಲೆಎತ್ತಿನಿಂತಿದೆ. ಈ ಸ್ವತಂತ್ರ ರಾಷ್ಟ್ರಗಳ ಸಾಲಿನ ಯಾವದೇ ರಾಷ್ಟ್ರವು ಇದರಷ್ಟು ಇತರರಾಷ್ಟ್ರಗಳ ದೃಷ್ಟಿಯನ್ನು ಸೆಳೆದಿಲ್ಲ. ಪ್ರಪಂಚದ ಯಾವದೇ ರಾಷ್ಟ್ರದ ಮಕುಟವೂ ಹಿಂಸಾತತ್ವದ ರಕ್ತಸಿಂಚಿತವಾಗಿ ಒಂದಕ್ಕೊಂದು ಭೀಕರವೂ, ಭಯಾನಕವೂ ಆಗಿ ತೋರುತ್ತಿರಬೇಕು. ಆ ಕಾರಣವೇ ಜಗತ್ತಿನ ರಂಗದಲ್ಲಿ ಪರಸ್ಪರ ಕಚ್ಚಾಟ, ಸ್ಪರ್ಧೆ, ಭಯ ತಾಂಡವವಾಡುತ್ತಿರಬೇಕು. ಆದರೆ ಭಾರತದ ಮುಖವು ಶಾಂತವಾಗಿದ್ದು ಅಕೆಯ ಕಿರೀಟದಲ್ಲಿ ಶಾಶ್ವತ ಶಾಂತಿಯ ಬೆಳಕನ್ನು ಚೆಲ್ಲುವ ಸತ್ಯ, ಅಹಿಂಸೆ, ಸಹನೆ, ದಯೆಗಳ ಮುತ್ತು ರತ್ನಗಳಿವೆ. ಈ ಆಕರ್ಷಣೀಯ ಕಿರೀಟ ಧರಿಸಿದ ಭಾರತವು ಜಗತ್ತಿನ ಕಾತರ ದೃಷ್ಟಿಯನ್ನು ತನ್ನೆಡೆಗೆ ಸೆಳೆದಿದ್ದರೆ ಅದು ಆಶ್ಚರ್ಯವಲ್ಲ.

ಜಗತ್ತಿನ ಶಾಂತಿಗೆ ಪ್ರಯತ್ನಿಸಬೇಕಾದರೆ ಅಂತರಿಕ ಶಾಂತಿ ಇರಬೇಕು. ಸಾರ್ವತ್ರಿಕ ಹಬ್ಬಿರುವ ಬಡತನನಿವಾರಣೆಯಾಗಬೇಕು. ಲಂಚುಗುಳಿತನ, ಲಾಭಬಡಕತನ, ಸ್ವಾರ್ಥ ಸಂಕೀರ್ಣತೆಗಳು ಮಾಯವಾಗಬೇಕು. ಈ ಗುರಿಗೆ ನಾವು ಮುಡಿಯಾಗುವ ಪ್ರತಿಜ್ಞೆ ಮಾಡಬೇಕು. ರಿಪಬ್ಲಿಕ್ ಭಾರತವೆಂದು ಸಾರಿದಾಕ್ಷಣ ಏನೂ ಬಂದಂತಾಗಲಿಲ್ಲ. ಪ್ರತಿಯೊಬ್ಬ ಪ್ರಜೆಯು ಹೆಗಲಿನ ಮೇಲಿರುವ ರಾಷ್ಟ್ರರಜನೆಯ ಜವಾಬ್ದಾರಿಯನ್ನು ಯೋಗ್ಯ ರೀತಿ ನಿರ್ವಹಿಸಬೇಕು. ಇತ್ಥಾ ಒಕ್ಕಟ್ಟು, ಕಾರ್ಯದಕ್ಷತೆ, ನಿಸ್ವಾರ್ಥಬುದ್ಧಿಯನ್ನು ಭಗವಂತನು ಎಲ್ಲರಿಗೂ ಕೊಡಲಿ. ರಿಪಬ್ಲಿಕ್ ಭಾರತವು ಜಗತ್ತಿನ ಕಣ್ಮಣಿಯಾಗಲಿ.

ಕಂದಾಯ ಏರಿಸುವಿಕೆ.

ಮೇಲಿನ ಲೇಖನದಲ್ಲಿ ನ್ಯಕ್ಕಪಡಿಸಿರುವಂತೆ ಹಿಂದೂದೇಶಕ್ಕೆ ಸ್ವಾತಂತ್ರ್ಯವು ದೊರೆತು ಮೂರು 2½ ವರ್ಷಗಳಲ್ಲಿ ಹಿಂದೂದೇಶದ ಹೆಚ್ಚಿನ ಭಾಗಗಳಿಗೆಲ್ಲಾ ಪ್ರಜಾ ಸತ್ತಾತ್ಮಕ ಹೊಸ ರಾಜ್ಯಘಟನೆಯು ಜಾರಿಗೆ ಬಂದರೂ ಹಳೇ ಚೀಫ್ ಕಮಿಷನರ ಪ್ರಾಂತಗಳಿಗೆ ಇದು ಕೂಡಲೇ ಅನ್ವಯಿಸಿದಿರುವದು ವ್ಯಸನಕರ. ಆದರೂ ಈ ಪ್ರಾಂತಗಳಿಗೆ ಹೆಚ್ಚಿನ ತಡವಿಲ್ಲದೆ ಜನವರಿ ಸರಕಾರವು ಸಿಕ್ಕಲೇಬೇಕಾಗಿದೆ. ನಮ್ಮ ಪ್ರಾಂತದ ಮಟ್ಟಿಗೆ ಹೇಳುವದಾದರೆ ಇಲ್ಲಿಯ ಭವಿಷ್ಯತ್ತಿನ ವಿಚಾರವಾಗಿ ಹಲವು ವರ್ಷಗಳಿಂದ ಜನರಲ್ಲಿ ಭಿನ್ನಾಭಿಪ್ರಾಯವಿದ್ದು ಪ್ರತ್ಯೇಕ ಮತ್ತು ಸಂಯೋಜನಾ ಪಕ್ಷಗಳು ದೇಶದಲ್ಲಿ ಪ್ರಚಾರ ನಡೆಸುತ್ತಾ ಕೇಂದ್ರ ಸರಕಾರಕ್ಕೆ ತನ್ನ ತಮ್ಮ ಅಬಿಪ್ರಾಯಗಳನ್ನು ತಿಳಿಸುತ್ತಾ ಬಂದುದರ ಫಲವಾಗಿ ಇಂಡಿಯಾ ಸರಕಾರದವರು ಕೊಟ್ಟ ತೀರ್ಮಾನದಂತೆ ಕಡಿಮೆ ಪಕ್ಷ ಮುಂಬರುವ ಹತ್ತು ವರ್ಷಗಳ ವರೆಗಾದರೂ ಕೊಡಗನ್ನು ಬೇರೆ ಪ್ರದೇಶಗಳೊಂದಿಗೆ ಸಂಯೋಜನೆ ಮಾಡುವದಿಲ್ಲವೆಂಬುದು ಸ್ಪಷ್ಟವಾಗಿದೆ ಇನ್ನಾದರೂ ಎಡರು ರಾಜಕೀಯ ಪಂಗಡಗಳು ಹಾಗೂ ದೇಶೀಯರು ತನ್ಮಲ್ಲಿರುವ ಭಿನ್ನಾಭಿಪ್ರಾಯಗಳನ್ನು ಮರೆತು ಕೊಡಗಿನ ಅಭಿವೃದ್ಧಿಯ ದೃಷ್ಟಿಯಿಂದ ಒಗ್ಗಟ್ಟಾಗಿ ಕೆಲಸ ಮಾಡಲು ಯತ್ನಿಸಬೇಕಾಗಿರುವ ಈ ಸಂದಿಗ್ಧ ಸಮಯದಲ್ಲಿ ಸರಕಾರದವರು ಕಂದಾಯ ಏರಿಸುವ ಸೂಚನೆಯನ್ನು ಕೌನ್ಸಿಲಿನ ಮುಂದೆ ಚರ್ಚೆಗೆ ತರುವಂಥಾದ್ದು ಅಕಾಲಿಕವಾಗಿದೆ.

ಕೊಡಗಿನ ರಾಜಕೀಯ ಮತ್ತು ಆರ್ಥಿಕ ಪರಿಸ್ಥಿತಿಯಲ್ಲಿ ದೊಡ್ಡ ಬದಲಾವಣೆ ಹೊಂದಿರುವ ಈಗಿನ ಕಾಲದಲ್ಲಿ ಜನತೆಯ ಅಭಿಪ್ರಾಯವನ್ನು ಕೌನ್ಸಿಲ್ ಸಭೆಯಲ್ಲಿ ಯೋಗ್ಯ ರೀತಿಯಲ್ಲಿ ಪ್ರತಿಬಿಂಬಿಸುವ ಪ್ರತಿನಿಧಿಗಳನ್ನು ಆರಿಸುವ ಪ್ರಾಮುಖ್ಯ ಕೆಲಸವನ್ನು ಸರಕಾರದವರುಕೂಡಲೇ ಕೈಕೊಳ್ಳುವುದು ಆಗತ್ಯವಾಗಿದೆ. ಹೀಗೆ ಆರಿಸಲ್ಪಟ್ಟ ನಿಜವಾದ ಪ್ರತಿನಿಧಿಗಳು ಕೊಡಗಿನ ಆದಾಯ ವೆಚ್ಚವನ್ನು ಪರಿಶೀಲಿಸಿ ಮುಂದಿನ ಆಡಳಿತ ಕ್ರಮವನ್ನು ರೂಪಿಸಲು ಸಮರ್ಥರಾಗುವರು. ಹಾಗೆ ರೂಪಿಸುವ ಕಾಲದಲ್ಲಿ ತಮ್ಮ ಆಡಳಿತವನ್ನು ಜನರ ಹಿತದೃಷ್ಟಿಯಿಂದ ನಡೆಸಲು ಅನಶ್ಯ ವಿರವಲ್ಲಿ ಸಿಬ್ಬಂದಿ ಖೇತೆ ಮಾಡಿ ಬೇಕಾದ ಹೆಚ್ಚಿನ ಖರ್ಚಿಗಾಗಿ ಅನಶ್ಯ ಬೀಳುವ ತೆರಿಗೆಯನ್ನು ಎತ್ತಲೇ ಬೇಕಾಗುವುದು. ಜವಾಬ್ದಾರಿ ಸರಕಾರವನ್ನು ಅನುಭವಿಸುವ ಹಿಂದೂದೇಶದ ಇತರ ಪ್ರಾಂತಗಳು ತಮ್ಮ ಸರಕಾರದ ಖರ್ಚು ಹೆಚ್ಚುತ್ತಾ ಬಂದಂತೆಯೇ ಆದಕ್ಕೆ ಬೇಕಾದ ಆದಾಯವನ್ನು ಜನತೆಯಿಂದ ಒಂದಲ್ಲೊಂದು ರೀತಿಯಿಂದ ಪಡೆಯುತ್ತಿರುವರು ಮತ್ತು ಮುಂದೆಯೂ ಪಡೆಯಬೇಕಾಗುವುದು.

ಈ ದೃಷ್ಟಿಯಿಂದ ಕೊಡಗನ್ನು ಪ್ರತ್ಯೇಕ ಇಟ್ಟುಕೊಂಡು ಜವಾಬ್ದಾರಿ ಸರಕಾರ ಪಡೆಯಬೇಕೆನ್ನುವ ಕಾಂಕ್ಷೆ ಇರುವವರು ಅವಶ್ಯ ವಿದ್ದಲ್ಲಿ ಹೆಚ್ಚಿನ ತೆರಿಗೆ ಕೊಡಲು ಅಕ್ಷೇಪಿಸಲಾರರು. ಆದರೆ ಕೊಡಗಿನ ಇಂದಿನ ಸಂದಿಗ್ಧ ಸ್ಥಿತಿಯಲ್ಲಿ ಜನತೆಯ ಶಕ್ತಿಗೆ ಮೀರಿದ ಕಂದಾಯ ದರವನ್ನೂ ಈ ಮಸೂದೆಯು ಒಳಗೊಂಡಿರುವುದರಿಂದ ಆದನ್ನು ಒಪ್ಪಿಕೊಳ್ಳಲು ಜನರು ಹಿಂಜರಿಯಲು ಕಾರಣವಾಗಿದೆ. ಆದ್ದರಿಂದ ಈ ಮಸೂದೆಯನ್ನು ಮುಂದಕ್ಕೆ ತಳ್ಳಿ ಯೋಗ್ಯವೆನಿಸುತ್ತದೆ.

ದೇಶದ ಈಗಿನ ಪರಿಸ್ಥಿತಿಯನ್ನು ಅರಿತುಕೊಂಡು ಇಲ್ಲಿಯ ಸರಕಾರವನ್ನು ನಡೆಸಲು ಈ ಮಸೂದೆಯು ಅವಶ್ಯವೆಂದುಕೇಂದ್ರ ಸರ್ಕಾರವು ತಿಳಿದು ಅದನ್ನು ಚರ್ಚೆಗೆ ಕೌನ್ಸಿಲಿನ ಮುಂದೆ ತಂದದ್ದೇ ಆಪರೆ ಆದನ್ನು ಸಂಪೂರ್ಣವಿರೋಧಿಸುವ ಬದಲು ಜನಾಭಿಪ್ರಾಯದಂತೆ ಆದರಲ್ಲಿರುವ ದರವನ್ನು ಇಳಿಸುವ ಮತ್ತು ಬಡವರಿಗೆ ಕಂದಾಯ ಏರಿಸದಂತೆ ಮಾಡುವ ತಿದ್ದುಪಡಿ ಮಾಡಲೋಸುಗ ಅದನ್ನು ಒಂದು ಸಿಲೆಕ್ಟ್ ಕಮಿಟಿಗೆ ಬಿಡುವದೇ ಯುಕ್ತವೆಂದು ನಮಗನಿಸುತ್ತದೆ ಬದಲು ಮಸೂದೆಯನ್ನು ಸಂಪೂರ್ಣ ವಿರೋಧಿಸಿದ್ದಾದರೆ ಕೇಂದ್ರ ಸರಕಾರವು ಅದನ್ನು ಸರ್ಟಫೈಮಾಡಿ ಜಾರಿಗೆ ತರುವ ಸಂದರ್ಭದಲ್ಲಿ ಮಸೂದೆಯಲ್ಲಿ ತೋರಿಸಿರುವ ಹೆಚ್ಚಿನ ದರ ಕಂದಾಯವನ್ನೇ ಜನತೆಯಮೇಲೆ ಹೊರಿಸಲಾಗುವದು.

ಕೊಡಗಿನ ಭವಿಷ್ಯದ ನಿರ್ಣಯಕ್ಕೆ ಇಲ್ಲಿಯ ಸರಕಾರದ ಆರ್ಥಿಕ ಸ್ಥಿತಿಯು ಮುಖ್ಯ ಆಧಾರವಾಗಿದೆ. ಆದ್ದರಿಂದ ಸರಕಾರದ ಆದಾಯ ಏರಿಸುವದಕ್ಕೂ ಕೊಡಗಿನ ಭವಿಷ್ಯತ್ತಿಗೂ ಸಂಬಂಧವಿಲ್ಲವೆನ್ನುವದು ಸರಿಯಲ್ಲ. ಕೊಡಗಿನ ತೃಪ್ತಿಕರವಾದ ವಾರ್ಷಿಕ ಉತ್ಪತ್ತಿಯೂ, ಆದರ ಹಿಂದಿನ ದೊಡ್ಡ ಉಳುವರಿಯೂ ಕೊಡಗನ್ನು ಕೆಲ ವರ್ಷಗಳ ವರೆಗಾದರೂ ಪ್ರತ್ಯೇಕವಾಗಿಡಲು ಮುಖ್ಯ ಕಾರಣವೆಂಬುದನ್ನು ಯಾರೂ ಮರೆಯು ಬಾರದು. ಸರಕಾರವು ಈ ತತ್ಕಾಲದ ತೀರ್ಮಾನವನ್ನು ಉಪಯೋಗಿಸಿ ಕೊಡಗನ್ನು ಪ್ರಾಯೋಗಿಕ ಪ್ರತ್ಯೇಕವಿಟ್ಟು ಜವಾಬ್ದಾರಿ ಸರ್ಕಾರ್ ಪಡೆಯುವದು ಕೂಡ ನನ್ನು ಸರಕಾರದ ಮುಂದಿನಆದಾಯ ವೆಚ್ಚವನ್ನು ಹೊಂದಿಕೊಂಡಿದೆ ಎಂಬುದರಲ್ಲಿ ಸಂಶಯವಿಲ್ಲ

ದೊಡ್ಡ ಪ್ರಾಂತದೊಡನೆ ಕೊಡಗಿನ ಸಂಯೋಜನೆಯೊದರೆ ಕೊಡಗಿನವರು ಈಗಿರುವ ಕಡಿಮೆ ದರದ ಕಂದಾಯ ಕಾಣಿಕೆಗಳನ್ನೇ ಕೊಡುತ್ತಿರುವೆವೆಂದು ಯಾರು ಭಾವಿಸಬಾರದು. ಇದಕ್ಕೆಂಥಾ ಹೆಚ್ಚಿನ ದರದ ಕಂದಾಯವನ್ನು ಕೊಡಬೇಕಾಗುವದಲ್ಲದೆ ಈ ಕಂದಾಯವು ನಮ್ಮ ಹಿತಕ್ಕಾಗಿ ಇಲ್ಲಿಯೇ ಖರ್ಚಾಗುವದೆಂದು ಹೇಳಲಾಗುವದಿಲ್ಲ. ಆದ್ದರಿಂದ ದೇಶೀಯರು ತಾತ್ಕಾಲಿಕ ಉಪಯೋಗ ಬಹುದಾದ ಚಿಕ್ಕ ಲಾಭವನ್ನು ಆಶಿಸಿ ನಂತರ ಉಂಟಾಗುವ ದೊಡ್ಡ ಕಷ್ಟನಷ್ಟಗಳಿಗೆ ಗುರಿಯಾಗಬಾರದು. ಈ ಗುರಿಯು ದೃಷ್ಟಿಯಿಂದ ಸರಕಾರದ ಆದಾಯವನ್ನು ಹೆಚ್ಚಿಸುವ ಯೂ ಖರ್ಚನ್ನು ಖೋತಿ ಮಾಡುವ ಯೋಜನೆಗಳಿಗೆ ಜನರು ತಮ್ಮ ಅಭಿಪ್ರಾಯವನ್ನು ದೀರ್ಘಾಲೋಚನೆಯಿಂದ ಕೊಡಬೇಕಾಗಿದೆ.

ವರ್ತಮಾನ.

ಈ ತಾರೀಕು ೧೯ರಲ್ಲಿ ವೀರಾಜಪೇಟೆಯಲ್ಲಿ ಭಾಗ್ಯಲಕ್ಷ್ಮಿ ರೈಸ್ ಮಿಲ್ಲಿನ ಪ್ರಾರಂಭೋತ್ಸವವು ಕೊಡಗಿನ ಚೀಫ್ ಕಮಿಷನರ ಅಧ್ಯಕ್ಷತೆಯಲ್ಲಿ ನಡೆಯಿತು. ಅಧ್ಯಕ್ಷರು ಮಿಲ್ಲುಗಳ ಪ್ರಯೋಜನವನ್ನು ವಿವರಿಸಿ, ದೇಶದಲ್ಲಿರುವ ಎರಡು ರಾಜಕೀಯ ಪಕ್ಷಗಳು ಒಂದಾಗಿ ದೇಶದ ಉದ್ಧಾರಕ್ಕಾಗಿ ಕೆಲಸ ಮಾಡಬೇಕೆಂದು ಜನತೆಯಲ್ಲಿ ಆಸ್ಪೀಲು ಮಾಡಿದರು. ಮಿಂಡಿ ತೀರ್ಥಗಳ ನಂತರ ಸಮೊರ್ಸಭವು ಮುಕ್ತಾಯವಾಯಿತು.

ತಾರೀಕು ೨೦೦ಲ್ಲಿ ಕಾಕ್ಕೂರು ಶಾಲಾ ಕಟ್ಟಡದ ಆಸ್ತಿಭಾರ ಹಾಕುವ ಸಮಾರಂಭವು ಕೊಡಗಿನ ಚೀಫ್ ಕಮಿಷನರಿಂದ ನಡೆಸಲ್ಪಟ್ಟಿತು.

ವೀರಾಜಪೇಟೆ ಮತ್ತು ಮಡಿಕೇರಿ ಸಿವಿಲ್ ಆಸ್ಪತ್ರೆಗಳಲ್ಲಿ ಬುಧವಾರ ಮತ್ತು ಶುಕ್ರವಾರಗಳಲ್ಲಿ ಬೆಳಿಗ್ಗೆ ೧೧ ಗಂಟೆಗೆ ಗರ್ಭಿಣಿ ಹೆಂಗಸರನ್ನು ಮತ್ತು ಮಕ್ಕಳನ್ನು ಪರೀಕ್ಷಿಸಿ ಪ್ರತ್ಯೇಕ ಚಿಕಿತ್ಸೆನೀಡುವ ಏರ್ಪಾಡು ಮಾಡಿರುವುದೆಂದೂ, ಈ ಶಾಖೆಯು ಅಲ್ಲಿಯ ಲೇಡಿ ಅಸಿಸ್ಟೆಂಟ್ ಸರ್ಜನರ ಮೇಲ್ವಿಚಾರಣೆಯಲ್ಲಿರುವದೆಂದೂ ತಿಳಿಯಬಂದಿದೆ

ತಾರೀಕು ೪-೨-೫೦ನೇ ಶನಿವಾರ ಮಧ್ಯಾಹ್ನ ೩ ಗಂಟೆಗೆ ವೀರಾಜಪೇಟೆ ಮುನ್ಸಿಪಲ್ ಹಾಲ್‌ನಲ್ಲಿ ರಾ. ಬ. ಕೆ. ಪಿ. ಉತ್ಸವದ ಅಧ್ಯಕ್ಷತೆಯಲ್ಲಿ ಗುರುಮಹಮ್ಮದರ ಜಯಂತಿಯು ನಡೆಯುವದು.

ಇಂಡಿಯಾ ಪ್ರಜಾಪ್ರಭುತ್ವ ದಿನವು ಈ ತಾ. ೨೬ರಲ್ಲಿ ಕೊಡಗಿನ ಎಲ್ಲಾ ಭಾಗಗಳಲ್ಲಿ ಸಂಭ್ರಮದಿಂದ ಆಚರಿಸಲ್ಪಟ್ಟಿತು.

ಹೊಸ ಕಂದಾಯ.

ಲೇ:— ಶ್ರೀ ಕೆ ಪೂವಯ್ಯ.

ಪ್ರತಿ ಮೂವತ್ತು ವರ್ಷಗಳಿಗೊಮ್ಮೆ 'ರೀ ಸೆಟ್ಲ್‌ಮೆಂಟ್' ಮಾಡುವದು ಸರಕಾರದ ನೀತಿ. ಕೊಡಗಿನಲ್ಲಿ ಈ ಸೆಟ್ಲ್‌ಮೆಂಟು ೧೯೧೨ ರಲ್ಲಾಗಿ ಆದು ಪುನಹ ೧೯೪೨ ರಲ್ಲಿ ನಡೆಯಬೇಕಿತ್ತು. ಆಗರಿಯುದ್ದದ ಗೊಂದಲ, ಆ ಕಾಲಕ್ಕೆ ದೇಶದಲ್ಲಿದ್ದ ಸಾರ್ವತ್ರಿಕ ಅಶಾಂತಿಯ ಕಾರಣದಿಂದ ಆದು ಆಗ ನಡೆಯಲಿಲ್ಲ. ಈಗ ಕೊಡಗಿನಲ್ಲಿ 'ರೀ ಸೆಟ್ಲ್‌ಮೆಂಟ್' ನಡೆಸುವ ದೃಷ್ಟಿಯಿಂದ ಅಧಿಕಾರಿಯೊಬ್ಬರನ್ನು ತರಬೇತಿಗೆ ಕಳುಹಿಸಿರುವದಲ್ಲದೆ ಇದು ಆ್ಯನರು ಹಿಂತಿರುಗಿ ಬಂದೊಡನೇ ಪ್ರಾರಂಭವಾಗಿ ಸುಮಾರು ಐದು ವರ್ಷಗಳ ವರೆಗೆ ನಡೆಯುವದೆಂದೂ ಇದಕ್ಕೆ ಸುಮಾರು ೩ ಲಕ್ಷ ರೂಪಾಯಿಗಳು ವೆಚ್ಚವಾಗುವದೆಂದೂ ಅಂದಾಜು ಮಾಡಲಾಗಿದೆ.

ಮೂವತ್ತು ವರ್ಷಗಳ ನಂತರ ಹೊಸ ದರದ ಕಂದಾಯ ಜಾರಿಗೆ ಬರಬೇಕು. ಭೂಮಿಯ ಯೋಗ್ಯತೆಗಿಂಥಾ ಹೆಚ್ಚು ಯಾ ಕಡಿಮೆ ಕೊಡುತ್ತಿರುವವರನ್ನು, ಪರಿಶೀಲಿಸಿ ಕಂದಾಯ ನಿಶ್ಚಯಮಾಡುವದು ಸಂಪ್ರದಾಯ. ಆದರೆ ಈ ಕಾರ್ಯ ಸಾಧಿಸಲು ಸಾಲ್ಕಾರು ವರ್ಷ ಹಿಡಿಯುವದರಿಂದ ಸರಕಾರವು 'ಸಮ್ಮರಿ' ಕಂದಾಯ ವಿಧಿಸುವದಾಗಿದೆ. ಕಳೆದ ಸಾರಿ ಸೆಟ್ಲ್‌ಮೆಂಟ್ ಆದಾಗ ಹತ್ತು ವರ್ಷಗಳ ವರೆಗೆ ಈ 'ಸಮ್ಮರಿ' ಕಂದಾಯವಿತ್ತು. ಈ ಸಾರಿ ಐದು ವರ್ಷದ ಮಿತಿಗೆ ಒಳಪಟ್ಟು ಸೆಟ್ಲ್‌ಮೆಂಟ್ ಆಗುವ ವರೆಗೆ ಈ 'ಸಮ್ಮರಿ' ಕಂದಾಯ ವಿಧಿಸಬೇಕೆಂದು ಸರಕಾರದ ಮಸೂದೆಯೊಗಿದೆ.

ಸೆಟ್ಲ್‌ಮೆಂಟಿನ ವಿಚಾರದಲ್ಲಿ ಭಿನ್ನಾಭಿಪ್ರಾಯವಿಲ್ಲ. ಮೂವತ್ತು ವರ್ಷಗಳಿಗೊಮ್ಮೆ ಕಂದಾಯ ಸ್ಥಿತಿಯನ್ನು ಪರಿಶೀಲಿಸಿ ಹೊಸ ಏರ್ಪಾಡು ಮಾಡುವದು ಬಹುಕಾಲದಿಂದಲೂ ನಡೆಸು ಬಂದಿದೆ. ಈ ಸಂದರ್ಭದಲ್ಲಿ 'ಸಮ್ಮರಿ' ಕಂದಾಯ ಪದ್ಧತಿಯೂ ಆದರೊಂದಿಗೆ ನಡೆದು ಬಂದಿದೆ. ಇವರ ತತ್ವದ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ಯಾರೂ ಇದನ್ನು ವಿರೋಧಿಸಲಾರರು. ಆದರೆ ಈಗ ಸರಕಾರ ನಿಶ್ಚಯಿಸಿರುವ ಕಂದಾಯದ ದರವು ಠೀಕಾಪ್ಪದವಾಗಿದೆ.

೧೯೨೨ ರಲ್ಲಿ ನಿಶ್ಚಯಿಸಿದ ಕಂದಾಯ ದರವನ್ನು ಇಂದು ನಾವು ಪಾವತಿ ಮಾಡುತ್ತಿದ್ದೇವೆ. ಸಲ ವರ್ಷಗಳ ಹಿಂದೆ ನಿಶ್ಚಯಿಸಿದ ಈ ದರದ ಅಂದಿನ ಕಾಲಕ್ಕೂ, ಇಂದಿನ ಕಾಲಕ್ಕೂ ಪರಿಸ್ಥಿತಿ ವಿಪರೀತ ವ್ಯತ್ಯಾಸಗೊಂಡಿದೆ. ಸರಕಾರದ ಕಾರ್ಯಕಲಾಪಗಳೂ ಜನಾಬ್ದಾರಿಕೆಗಳೂ ಹೆಚ್ಚಾಗಿವೆ. ಆಸ್ಪತ್ರೆ, ಶಾಲೆ, ಕಾಲೇಜು, ರಸ್ತೆ, ಮಂತ್ರಿತರ ಜನಹಿತ ಕಾರ್ಯಗಳನ್ನು ಸರಕಾರ ಮಾಡಲೇಬೇಕಾಗಿದೆ. ಸರಕಾರವೆಂದರೆ ಅದಕ್ಕೆ ಸ್ವಂತ ಆದಾಯವೆಲ್ಲಿದೆ? ಜನರು ಕೊಟ್ಟ ಕಂದಾಯಕದಿಗಳೇ ಅದರ ಸಂಪತ್ತು. ಆದನ್ನೇ ಜನರ ಉಪಯೋಗಕ್ಕಾಗಿ ವಿನಿಯೋಗಿಸುವದು ಅದರ ಕರ್ತವ್ಯ. ಇಂದು ಕೊಡಗಿನ ದೈನಂದಿನ ಆಡಳಿತದ ಖರ್ಚೇ ಆಂದಿನ ವಿಶೇಷ ಖರ್ಚಿಗಿಂಥಾ ಹೆಚ್ಚಾಗಿದೆ. ಈ ರೀತಿ ಜವಾಬ್ದಾರಿ ಹೆಚ್ಚುತ್ತಿದ್ದು, ಜನತೆಗಾಗಿ ಮಾಡಬೇಕಾದ ಕಾರ್ಯ ಹಲವಿರುವಾಗ ಅವುಗಳನ್ನು ಸಾಧಿಸಲಿ ಜನತೆಯು ೧೯೧೨ರ ದರದ ಕಂದಾಯವನ್ನೇ ಕೊಡುತ್ತಿದ್ದರೆ ಸರಕಾರ ಏನು ಮಾಡೀತು? ಆದು ಹಣವೆಲ್ಲಿಂದ ತಂದೀತು?

ಕೊಡಗಿನ ಇಂದಿನ ಸರಕಾರ ಇನ್ನೂ ಜನರ ಸರಕಾರವಾಗಿಲ್ಲ ನಿಜ. ಆದರೆ ಆದು ಸ್ವಾತಂತ್ರ್ಯಕ್ಕೆ ಹಿಂದಿನ ನಿರಂಕುಶ ಸರಕಾರವೇ ಎಂದು ಹೇಳುವದು ಸರಿಯಲ್ಲ ಏಕೆಂದರೆ ಇಂದು ಕೇಂದ್ರಸಲ್ಲಿ ಜನಪ್ರತಿನಿಧಿಗಳಿಂದಲೇ ಸರಕಾರ ನಡೆದಿದೆ ಫ್ರೌಡನುತದಾನ ಪದ್ಧತಿಯ ಚುನಾವಣೆಯೂ ಗಿ ಸರಕಾರ ರಚಿಸಲ್ಪಡದಿದ್ದರೂ, ನೆಹರೂ, ಪಠೇಲರು ಜವಾಬ್ದಾರಿ ವಹಿಸಿದ ಸರಕಾರವು ಜನಪ್ರಿಯ ಸರಕಾರವಲ್ಲವೆಂದು ಹೇಳಲಾಗದು. ಅವರ ನಿರ್ದೇಶದಂತೆ ಕೊಡಗಿನ ಆಡಳಿತ ನಡೆಯುತ್ತಿರುವಾಗ ಕೊಡಗಿನ ಸರಕಾರ ಈ ಹಿಂದಿನ ನಿರಂಕುಶ ಚೀಫ್ ಕಮಿಷನರ ಸ್ವೇಚ್ಛೆಯ ಆಡಳಿತವಲ್ಲ. ಕೊಡಗು ಸರಕಾರವು ಶಾಸನ ಸಭೆಯ ಮುಂದೆ ಇಡಲಿರುವ ಮಸೂದೆಯು ಕೇಂದ್ರ ಸರಕಾರದ ಅರ್ಥಾತ್ ಪರ್ದಾರ್ ಪಠೇಲರ ಒಪ್ಪಿಗೆ ಪಡೆದು ಮಂಡಿತವಾದುದು.

ಈ ಮಸೂದೆ ನಮ್ಮ ಇಂದಿನ ಕೌನ್ಸಿಲಿನ ಮುಂದೆ ಬರಲಿದೆ. ಹಾಗೆ ಬಂದಾಗ ನಮ್ಮ ಇಂದಿನ ಕೌನ್ಸಿಲು ಪದಸ್ಥರು ದೇಶದ ಜನಾಭಿಪ್ರಾಯವನ್ನು ಕೊಡಲು ಅರ್ಹರಲ್ಲವೆಂದು ಸ್ಪಷ್ಟವಾಗಿ ಹೇಳಬೇಕಾಗಿದೆ. ಏಕೆಂದರೆ ಈ ಕೌನ್ಸಿಲಿನ ಚುನಾವಣೆ ನಡೆದು ಐದು ವರ್ಷಗಳಾದವು. ಈ ಐದು ವರ್ಷಗಳಲ್ಲಿ ಮತದಾರ ಬದಲಾವಣೆಯಾಗಿದೆ. ಅಂದು ಜನತೆಗೆ ಮತದಾರ ವಲ್ಲನ ಬ್ರಿಟಿಷ್ ಸರಕಾರನ ಕಾಲದಲ್ಲಿ ಕೆಲವು ನಿಶ್ಚಿತ ಜನರಿಂದ ಆರಿಸಲ್ಪಟ್ಟ ಪ್ರತಿನಿಧಿಗಳಿನರು! ಆದರೆ ದೇಶವು ಸ್ವತಂತ್ರವಾಗಿರುವ ಇಂದೂ ಆಂದಿನ ಆ ಜನರೇ ದೇಶದ ಅಭಿಪ್ರಾಯ ಕೊಡುವದೆಂದರೆ ಅಪ್ರಸ್ತುತವಾದುದು. ಆದ್ದರಿಂದ ಈ ಪ್ರತಿನಿಧಿಗಳು ಕೊಡುವ ಅಭಿಪ್ರಾಯ ಜನರ ಅಭಿಪ್ರಾಯವಾಗದು ಜನರ ಅಭಿಪ್ರಾಯ ಬೇಕಾದರೆ ಹೊಸ ಚುನಾವಣೆ ಬೇಕು.

ಈಗ ಕಳೆದ ಕೆಲವು ವರ್ಷಗಳಿಂದ ಕೊಡಗಿನ ರಾಜಕೀಯ ರಂಗದಲ್ಲಿ ಅಪಸ್ವರವೇ ಹೆಚ್ಚು. ವಿವಿಧ ಪಕ್ಷಗಳಾಗಿ ದೇಶದ ಪ್ರಗತಿಯು ಕುಂಟುತ್ತಾ ನಡೆದಿದೆ. ಈ ನಿನ್ನ ಪರಂಪರೆಯನ್ನು ತೀಗಿಸಿ, ಕೊಡಗಿನ ಭವಿಷ್ಯ ಸಮಸ್ಯೆಯನ್ನು ಬಗೆಹರಿಸಲು ಉಳಿದಿರುವ ಒಂದು ಮಾರ್ಗವೆಂದರೆ ಹೊಸ ಚುನಾವಣೆ. ಈ ಚುನಾವಣೆಯ ಕಾಲಕ್ಕೆ ದೇಶದ ಮುಂದಿರುವ ಸಮಸ್ಯೆಯು ಜನತೆಯು ಮುಂದಿದ್ದು ಆ ದೃಷ್ಟಿಯಿಂದ ನಡೆಯುವದರಿಂದ ಅದರಲ್ಲಿ ಆರಿಸಿ ಬಂದ ಪ್ರತಿನಿಧಿಗಳು ದೇಶದ ಭವಿಷ್ಯದ ವಿಚಾರವನ್ನು ನಿರ್ಣಯಿಸಲು ಶಕ್ತರಾಗುವರು. ಆಲ್ಲದೆ ದೇಶದ ಅದಾಯ ಮೆಚ್ಚುಗಳನ್ನು ಪರಿಶೀಲಿಸಿ, ಅನಾವಶ್ಯ ಖರ್ಚುಗಳನ್ನು ಪೋತೆಮಾಡಿ ಬಡೆಟ್ಟನ್ನು ಸರಿಗಟ್ಟಲು ಅವರೇ ಸಮರ್ಥರಾಗುವರು. ದೇಶೀಯ ಜನರಿಗೆ ಹೆಚ್ಚಿನ ಸಲಕರಣೆಗಳನ್ನು ಒದಗಿಸುವ ದೃಷ್ಟಿಯಿಂದ ಕಂದಾಯ ವಿಧಿಸುವದು ಅವಶ್ಯವೆಂದು ತೋರಿದರೆ ಆದನ್ನು ಹೇಗೆ ಮತ್ತು ಯಾವ ದರದಲ್ಲಿ ಎಂಥಾ ಕಂದಾಯ ವಿಧಿಸಬೇಕೆಂಬುದನ್ನೂ ಜನಮತದಂತೆ ನಿಶ್ಚಯಿಸಲು ಅವರೇ ಯೋಗ್ಯರಾಗುವರು.

ಈಗ ಮುಂದೆ ಬಂದಿರುವ ಕಂದಾಯ ಹೆಚ್ಚಿಸುವ ಸಮಸ್ಯೆಯೊಂದಿಗೆ ಕೊಡಗಿನ ಭವಿಷ್ಯದ ಪ್ರಶ್ನೆಯೂ ಸವರಸವಾಗಿ ಬೆರೆತಿದೆ ಎಂಬುದನ್ನು ಎಲ್ಲರೂ ಸ್ಪಷ್ಟವಾಗಿ ಗಮನಿಸಬೇಕು. ಕೊಡಗಿನ ಆರ್ಥಿಕ ಭದ್ರತೆಯು ಮೇಲೆಯೇ ಆದರ ಪ್ರತ್ಯೇಕತೆಯ ಸಾಧ್ಯತೆಯೂ ಇರುವದರಿಂದ ಕಂದಾಯ ಏರಿಸುವ ಪ್ರಶ್ನೆಯು ಭವಿಷ್ಯ ಪ್ರಶ್ನೆಯಷ್ಟೇ ಪ್ರಾಮುಖ್ಯ. ಆದೇ ಸಂಯೋಜನವಾದಿಗಳು ಕಂದಾಯದ ಪ್ರಶ್ನೆಯನ್ನು ವಿರೋಧಿಸಿ ಕೊಡಗಿನ ಆದಾಯವು ಹೆಚ್ಚದಂತೆ ಪ್ರಯತ್ನಿಸುವದರ ಗುಟ್ಟಾಗಿದೆ.

ಕೊಡಗಿನ ಜನರು ಒಗ್ಗಟ್ಟಾಗಿ ವರ್ತಿಸಿರೆ ಅವರ ಯಾವದೇ ಕೇಳಿಕೆಯನ್ನು ಕೇಂದ್ರ ಸರಕಾರವು ಪಲ್ಲಿಸುವದೆಂದು ಮೊನ್ನೆಯಾಗಿ ಬಂದಿದ್ದ ಶ್ರೀ. ವಿ. ಪಿ. ಮೆನನರು ಹೇಳಿದರು. ಈ ದೃಷ್ಟಿಯಿಂದಲೇ ಕೊಡಗಿನ ಎರಡೂ ಪಕ್ಷದವರೂ ಒಂದಾಗಬೇಕೆಂದು ಅಫೀಲುಮಾಡಿದರು. ಕೊಡಗಿನ ಸಂಯೋಜನಾ ಪ್ರಶ್ನೆಯು ಮುಂದಿನ ಹತ್ತು ವರ್ಷಗಳ ವರೆಗೆ ಬರುವದಿಲ್ಲವಾದ ಕಾರಣ ಒಗ್ಗಟ್ಟಾಗಿ ಯೋಗ್ಯ ಆಡಳಿತ ಕ್ರಮವನ್ನು ರೂಪಿಸಿಕೊಳ್ಳುವ ಪ್ರಯತ್ನ ಮಾಡಬೇಕೆಂದೂ ಸೂಚಿಸಿದರು. ಇಂಥಾ ಒಪ್ಪಂದಕ್ಕೆ ಸಂಯೋಜನ ಪಕ್ಷವು ತಯಾರಾಗಿಲ್ಲ. ತಮ್ಮ ಸಂಯೋಜನಾತತ್ವವನ್ನು ಮುಂಬರುವ ಹತ್ತು ವರ್ಷಗಳ ವರೆಗೆ ಬದಿಗಿಟ್ಟು ದೇಶದ ಹಿತದೃಷ್ಟಿಯಿಂದ ಸಹಕರಿಸಿ ಕೆಲಸ ಮಾಡಲು ಅವರು ತಯಾರಿಲ್ಲ. ಆದ್ದರಿಂದ ಯಾವ ಒಪ್ಪಂದಕ್ಕೂ ಎಡೆಯಿಲ್ಲದಾಗಿದೆ. ಈಡೆಯವರೆಗೆ ತಮ್ಮ ಸಂಯೋಜನಾವಾದವನ್ನು ಸಮರ್ಥಿಸುವ ನಿರ್ದಾರ ಅವರು ಮಾಡಿರುವರು. ಈ ಭಿನ್ನಾಭಿಪ್ರಾಯದ ಕಾರಣದಿಂದಲೇ ಕೊಡಗಿಗೆ ಸುಧಾರಣೆ ದೊರೆಯುವದು ಸಧ್ಯಕ್ಕೆ ಸಾಧ್ಯವಾಗಿಲ್ಲ.

ಮುಂಬರುವ ಹತ್ತು ವರ್ಷಗಳವರೆಗಾದರೂ ಕೊಡಗಿನ ಆಡಳಿತವನ್ನು ಜನಹಿತಕಾರಕವಾಗಿ ನಡೆಸುವ ಪ್ರಯತ್ನಕ್ಕೆ ಸಂಯೋಜನಾವಾದಿಗಳು ವಿರೋಧ ಮಾಡಲೇಬೇಕು. ಏಕೆಂದರೆ ಕೊಡಗಿನಲ್ಲಿ ಜನಹಿತ ಆಡಳಿತ ನಡೆದರೆ ಸಂಯೋಜನೆಯ ಸಂಭವ ಕಡಮೆಯಾದುದರಿಂದ ಯಾವ ರೀತಿಯಲ್ಲೂ ಕೊಡಗಿನ ಆಡಳಿತ ಅಯೋಗ್ಯವೆಂದೂ ಆರ್ಥಿಕ ಸ್ಥಿತಿ ಬಲವಿಲ್ಲದ್ದೆಂದೂ ಸಿದ್ಧ ಮಾಡುವದೇ ಅವರ ಪ್ರಯತ್ನವಾಗಿದೆ. ಈ ಕಾರಣದಿಂದಲೇ ಈ ಹಿಂದೆ ಅವರು ವ್ಯವಸಾಯ ಆದಾಯ ತೆರಿಗೆಯ ವಸೂಲಿಗೆ ವಿರೋಧ ಮಾಡಿದುದೂ ಈಗ ಕಂದಾಯ ಹೆಚ್ಚಿಸಲು ವಿರೋಧಿಸುವದೂ ಆಗಿದೆ. ಕೊಡಗಿನಲ್ಲಿ ಮದ್ಯಪಾನ ನಿಯಂತ್ರಣವನ್ನು ಜಾರಿಯಲ್ಲಿ ತಂದ ಕಾರಣ ಒಟ್ಟು ೫ ಲಕ್ಷ ರೂಪಾಯಿ ಸರಕಾರಕ್ಕೆ ನಷ್ಟವಾಗುತ್ತಿದೆ. ಇದಷ್ಟನ್ನು ಭರ್ತಿ ಮಾಡಲಿಕ್ಕಾಗಿ ವ್ಯವಸಾಯ ಆದಾಯ ತೆರಿಗೆಯನ್ನು ಸರಕಾರ ತಂದಿತು. ಆದರೆ ಇದನ್ನು ವಿರೋಧಿಸಿ ಸರಕಾರದ ಬೊಕ್ಕಸಕ್ಕೆ ಈ ಸಂಯೋಜನವಾದಿಗಳು ೫ ಲಕ್ಷ ರೂಪಾಯಿಗಳ ನಷ್ಟ ಮಾಡಿದರೆನ್ನಬಹುದು. ಈ ರೀತಿ ಸರಕಾರದ ಆರ್ಥಿಕ ಆಡಿಗಲ್ಲನ್ನು ಅಲ್ಲಾಡಿಸಿ ಪ್ರತ್ಯೇಕ ಸರಕಾರ ನಡೆಸಲು ಸಾಧ್ಯವಿಲ್ಲವೆಂದು ಸಿದ್ಧಪಡಿಸುವದೇ ಅವರ ಗುರಿ.

ಕೊಡಗಿನ ಸರಕಾರದಲ್ಲಿ ೫೦ ಲಕ್ಷ ಉಳುವರಿ ಇದೆ. ಆದನ್ನಿಟ್ಟುಕೊಂಡು ಈ ಹೆಚ್ಚಿನ ಕಂದಾಯವೇಕೆ? ಎಂದೂ ಹಲವರು ಪ್ರಶ್ನಿಸುತ್ತಾರೆ. ಈ ೫೦ ಲಕ್ಷ ರೂಪಾಯಿಗಳು ಈಗಾಗಲೇ ಇಂಥಿಂಥಾ ಯೋಜನೆಗಳಿಗೆ ಇಷ್ಟಿಷ್ಟೆಂದು ವಿಭಾಗಿಸಲ್ಪಟ್ಟಿದೆ ಲಕ್ಷ್ಮಣತೀರ್ಥ ಆಣೆಕಟ್ಟು ಯೋಜನೆಗೆ ಎಂಟು ಲಕ್ಷ, ಹಾರಂಗಿ ಯೋಜನೆಗೆ ಇಪ್ಪತ್ತು ಲಕ್ಷ, ಕಾಲೇಜು ಕಟ್ಟಡ, ಬೇತರಿ, ಕೊಟ್ಟವಂಡಿ ಸೇತುವೆ ಮತ್ತಿತರ ವಿವಿಧ ಉದ್ಯಮಗಳಿಗಾಗಿ ಈ ಹಣ ಇಡಲ್ಪಟ್ಟಿದೆ. ಆದ್ದರಿಂದ ಸರಕಾರದ ಆದಾಯವನ್ನು ಹೆಚ್ಚಿಸಿ ಇನ್ನೂ ಜನಹಿತ ಕೆಲಸ ಮಾಡಿ ದೈನಂದಿನ ಆಡಳಿತ ಸುಗಮವಾಗಿ ನಡೆದು ಕೊಡಗು ಆದರ್ಶ ನಾಡಾಗುವಂತೆ ಮಾಡುವದೇ ಈ ಹೊಸ ಕಂದಾಯದ ಗುರಿ.

ಈ ಕಂದಾಯ ಏರಿಸುವ ಮಸೂದೆಯನ್ನು ಮುಂಬರುವ ಚುನಾವಣೆಯವರೆಗೆ ಮುಂದರಿಸದೆ ಸರಕಾರವು ಈಗಲೇ ಕೌನ್ಸಿಲ್ ಮೀಟಿಂಗಿನಲ್ಲಿ ಮುಂದಿಡುವದಾದರೆ ಜನ ಪ್ರತಿನಿಧಿಗಳು ಎರಡು ಕಾರಣಗಳಿಗಾಗಿ ಆದನ್ನು ತಿರಸ್ಕರಿಸಬೆ ಜನರ ಅಭಿಪ್ರಾಯ ತೆಗೆಯಲು ಒಂದು ಸಿಲೆಕ್ಟ್ ಕಮಿಟಿಗೆ ಬಿಡಬೇಕು. ಒಂದನೆಯದಾಗಿ ಈ ಮಸೂದೆಯನ್ನು ತಿರಸ್ಕರಿಸಿದರೆ ಇಂಡಿಯಾ ಸರಕಾರದ ಅನುಮತಿ ಪಡೆದು ತಮ್ಮ ವಿಶೇಷ ಅಧಿಕಾರವನ್ನು ಉಪಯೋಗಿಸಿ ಸ್ಥಳೀಯ ಸರಕಾರವು ಆದನ್ನು ಜಾರಿಯಲ್ಲಿತರುವದು. ಆಗ ಈಗ ಸೂಚಿತವಾಗಿರುವ ದರದ ಕಂದಾಯವನ್ನು ಕೊಡಬೇಕಾಗುತ್ತೆ. ಒಂದು ವೇಳೆ ಕಂದಾಯ ಕೊಡದೆ ಆದಕ್ಕೆ ವಿರುದ್ಧ ವರ್ತಿಸುವದರಿಂದ ಈ ಸಂದಿಗ್ಧ ಸಮಯದಲ್ಲಿ ದೇಶಕ್ಕೆ ಅಹಿತವೇ ಆಗುವುದು. ಸಿಲೆಕ್ಟ್ ಕಮಿಟಿಗೆ ಈ ಮಸೂದೆಯನ್ನು ಬಿಟ್ಟರೆ ಸರಕಾರವು ಸೂಚಿಸಿದ ದರದಲ್ಲಿ ತಿದ್ದುಪಡಿ ಮಾಡುವ ಅವಕಾಶ ದೊರೆಯದಲ್ಲದೆ ಬಡಜನರಿಗೆ ತೊಂದರೆಯಾಗದ ರೀತಿ ಕಂದಾಯ ವಿಧಿಸುವ ತಿದ್ದುಪಡಿಗಳನ್ನು ಸೂಚಿಸಲು ಸಾಧ್ಯವಾಗುವದು.

೧೯೨೨ರಲ್ಲಿ ನಿಶ್ಚಯಿಸಿದ ದರದ ಕಂದಾಯವನ್ನೇ ಇಂದೂ ಪಾವತಿ ಮಾಡುತ್ತಿದ್ದು ತಮಗೆ ಪ್ರಗತಿಶೀಲ ಸರಕಾರ ಬೇಕೆಂದು ಜನ ಅಪೇಕ್ಷಿಸುವುದು ಯೋಗ್ಯವಾಗದು. ಆದ್ದರಿಂದ ಈ ಮಸೂದೆಯನ್ನು ಸಿಲೆಕ್ಟ್ ಕಮಿಟಿಗೆ ಬಿಡಲ್ಪಟ್ಟು ಅವರು ಜನತೆಯ ಸಹಿಯಾವಲೋಕನ ಮಾಡಿ ನಿಂತರ

ಸೂಚಿಸುವ ದರದ ಕಂದಾಯವನ್ನು ಕೊಡಲೇ ಬೇಕು. ಇಲ್ಲದಿದ್ದರೆ ಸರಕಾರದ ಆರ್ಥಿಕ-ಸ್ಥಿತಿಯು ಹಾಳಾಗಿ ಸಂಯೋಜನಾವಾದಿಗಳ ರೊಟ್ಟಿಗೆ ತುಪ್ಪ ಬಿದ್ದಂತಾಗುವದು. ಸಂಯೋಜನೆಯಾದರೆ ಆಲ್ಲಿ ಇದಕ್ಕಿಂಥಾ ಹೆಚ್ಚಿನ ಕಂದಾಯವನ್ನು ತೆರಬೇಕಾಗುವದೆಂಬುದನ್ನು ಯಾರೂ ಮರೆಯಬಾರದು. ಹಾಗೆ ನಾವು ಹೆಚ್ಚಿನ ಕಂದಾಯ ತೆತ್ತರೂ ಅದು ನಮ್ಮ ಹಿತಕ್ಕಾಗಿ ಖರ್ಚಾಗುವ ಸಂಭವ ಕಡಿಮೆ. ಅದು ಮೈಸೂರು ಸರಕಾರವಾಗಲೀ ಯಾ ಭಾವೀ ಕರ್ನಾಟಕ ಸರಕಾರವಾಗಲೀ ಕೂಡಿಯಲು, ವ್ಯವಸಾಯ ಮೊಡಲು ನೀರಿಲ್ಲದ ಬರಗಾಲಪೀಡಿತ ಭಾಗಗಳ ಸುಧಾರಣೆಗೆ ಮೊಬಲು ಯತ್ನಿಸುವುದೇ ವಿನಹ ವರ್ಷಕ್ಕೆ ಸರಾಸರಿ ನೂರು ಇಂಚುಮಳೆ ಬೀಳುವ ಕೊಡಗಿನ ಹೊಳೆಗೆ ಅಣೆಕಟ್ಟು ಕಟ್ಟಲಾರದು. ಹೊಟ್ಟಿಗೆ ಅನ್ನ, ವೈಗೆ ಬಟ್ಟೆ ಇಲ್ಲದವರ ನೆರವಿಗೆ ಯತ್ನಿಸುವದೇ ವಿನಹ ಆಷ್ಟೇ ಆಸ್ಥೆಯಿಂದ ಹೊಟ್ಟಿ ತುಂಬಿದ ಕೊಡಗಿನ ವಿದ್ಯಾ ಪ್ರಗತಿಗಾಗಿ ದುಡಿಯಲಾರದು. ಕೊಡಗು ಮುಂದರಿದಿದೆ. ಸಂಪತ್ತಿದೆಯೆಂಬುದೇ ನೆರೆಯವರಿಗೆ ಆಕರ್ಷಕವಾಗಲು ಕಾರಣ. ಆದ್ದರಿಂದ ಪರಿಸ್ಥಿತಿಯನ್ನು ಆಲೋಚಿಸಿ ಕೊಡಗಿನ ಭವಿಷ್ಯದ ಪ್ರಶ್ನೆಯು ಈ ಕಂದಾಯ ಸಮಸ್ಯೆಯಲ್ಲೂ ಸಮಾವೇಶವಾಗಿದೆಯೆಂಬುದನ್ನು ಅರಿತು ದೇಶೀಯರು ಎಚ್ಚರದಿಂದ ವರ್ತಿಸಬೇಕು. ತನ್ನ ಮನೆಯಲ್ಲಿ ಬತ್ತ ಕುಟ್ಟುವದು ಗೌರವಕ್ಕೆ ಹಾನಿಯೆಂದೂ ಕಷ್ಟಪ್ರಾಯವೆಂದೂ ತಿಳಿದರೆ ಪರಕೀಯರ ಮನೆಯಲ್ಲಿ ಕಲ್ಲೂಡಿಯಬೇಕಾದೀತು!

ನೋಟೀಸು.

ಕೊಡಗು ಮೂಜಿ ಸಿಪಾಯಿಗಳ ಸಂಘವು ವೀರಾಜಪೇಟೆಯಲ್ಲಿ ಸ್ಥಾಪಿಸಲ್ಪಟ್ಟಿದೆ. ಕೊಡಗಿನ ಎಲ್ಲಾ ಮೂಜಿ ಸಿಪಾಯಿಗಳು ರೂಪಾಯಿ ಒಂದನ್ನು ಈ ಕೆಳಗೆ ರುಜು ಹಾಕಿದವರಿಗೆ ಕಳುಹಿಸಿ ಮೆಂಬರಾಗಬೇಕಾಗಿ ಈ ಮೂಲಕ ತಿಳಿಕೊಳ್ಳಲಾಗಿದೆ. ಕೊಡಗಿನ ಎಲ್ಲಾ ಮೂಜಿ ಸಿಪಾಯಿಗಳ ಆರ್ಥಿಕ, ನೈತಿಕ ಅಭಿವೃದ್ಧಿಗಾಗಿ ಈ ಸಂಘವನ್ನು ಸ್ಥಾಪಿಸಿದ್ದಾಗಿದೆ. ಆದ್ದರಿಂದ ಈ ಸುಸಮಯವನ್ನು ಯಾರು ಕಳೆದುಕೊಳ್ಳಬಾರದು.

ಯಸ್. ಬಿ. ಉತ್ತಪ್ಪ,
5-4 ಪ್ರೆಸಿಡೆಂಟ್,
ಕೊಡಗು ಮೂಜಿ ಸಿಪಾಯಿಗಳ ಸಂಘ.

ಪ್ರಕಟಣೆ.

ಕೊಡಗು ಮೂಜಿ ಸಿಪಾಯಿಗಳ ಸಹಕಾರ ಟ್ರಾನ್ಸ್‌ಪೋರ್ಟು ಸಂಘವನ್ನು ಕೊಡಗು ಮೂಜಿ ಸಿಪಾಯಿಗಳ ಸಂಘದ ಶಾಖೆಯೂಗಿ ಮಡಿಕೇರಿಯಲ್ಲು ತೆರೆಯಲು ತೀರ್ಮಾನಿಸಲಾಗಿದೆ. ಶೇರು 1ರ ರೂ. 10/- ಗಳಂತೆ ಪ್ರತಿ ಒಬ್ಬ ಮೆಂಬರನು ಶೇರು ಹೊಂದಿಕೊಳ್ಳಬಹುದು. ಆದರೆ ಒಬ್ಬನಿಗೆ ನೂರು ಶೇರುಗಳಿಗಿಂತ ಹೆಚ್ಚು ಶೇರುಗಳನ್ನು ಕೊಡಲಾಗುವುದಿಲ್ಲ. ಮೆಂಬರುಗಳು ಈ ಕೆಳಗೆ ರುಜು ಮಾಡಿದವರಿಗೆ ಮನಿಯೂರ್ಡರ್ ಮೂಲಕ ಹಣ ಕಳುಹಿಸತಕ್ಕದ್ದು. ಸರ್ಕಾರಿ ಉದ್ಯೋಗಸ್ಥರೂ ಮೆಂಬರುಗಳಾಗಿ ಸೇರಬಹುದು. ಹಾನತಿಯೂದ ಮೊಬಲಗಿಗೆ ತತ್ಕಾಲದ ರಶೀತಿ ಕೊಡಲಾಗುವುದು. ಸಂಘವು ರಿಜಿಸ್ಟರ್ ಆದನಂತರ ಮೆಂಬರುಗಳ ಹೆಸರುಗಳನ್ನು ರಿಜಿಸ್ಟರ್ ಮಾಡಲಾಗುವುದು.

ಯಸ್. ಬಿ. ಉತ್ತಪ್ಪ
ಪ್ರೆಸಿಡೆಂಟ್,
ಕೊಡಗು ಮೂಜಿ ಸಿಪಾಯಿಗಳ ಸಂಘ.
5-4

ಭದ್ರತೆ! 17 ವರ್ಷಗಳ ಪರಿಪಕ್ವ ಅನುಕೂಲತೆ !!
ಅನುಭವಶೀಲತೆ!!

ದಿ ವಿಜಯ ಬ್ಯಾಂಕ್ ಲಿಮಿಟೆಡ್
ಮುಂಖ್ಯ ಖಜೇರಿ,
ಕದ್ರಿ ರೋಡ್, ಮಂಗಳೂರು.

ನಿರಖು ಠೇವಣಾತಿ ಬಡ್ಡಿದರ:-

3	ತಿಂಗಳು	3%
6	,,	3½%
12	,,	3¾%
24	,,	4 %

ರೂಪಾಯಿ ೧೫,೦೦೦ಕ್ಕೆ ಮಿರಿದ ಒಂದೇ ಡಿಪಾಜಿಟ್ಟಿಗೆ ಮೇಲಿನ ದರಕ್ಕಿಂಥಾ ¼% ಹೆಚ್ಚಿಗೆ.

ಶಾಖೆಗಳು:- ಸಿಟಿ ಮಂಗಳೂರು, ಬೈಂದೂರು, ಕುಂದಾಪುರ, ಬ್ರಹ್ಮಾವರ, ಉಡುಪಿ, ಕಾಪು, ಕಾರ್ಕಳ, ಕಾಸರಗೋಡು, ಕಾಞಂಗಾಡ್, ಪುತ್ತೂರು, ಮಡಿಕೇರಿ ಮತ್ತು ಮುಂಬಾಯಿ.

ಒಟ್ಟು ವಹಿವಾಟು ಭಂಡವಾಳ ರೂ. ೪೦ ಲಕ್ಷಕ್ಕೂ ಮಿರಿದೆ.
ಎಲ್ಲಾ ವಿಧದ ಆಧುನಿಕ ಬೇಂಕಿಂಗ್ ವಹಿವಾಟುಗಳು ಅತೀ ಕಡಿಮೆ ದರದಲ್ಲಿ ದಕ್ಷತೆಯಿಂದ ನಡೆಸಲ್ಪಡುವವು.
ಹೆಚ್ಚಿನ ವಿವರಗಳಿಗೆ ಬರೆಯಿರಿ:- ಏಜಂಟ್,
ಮಡಿಕೇರಿ ಶಾಖೆ, ಮಡಿಕೇರಿ.

ಶ್ರೀ ಟಿ. ಎನ್. ಗೋಲಿಂದರಾಜು, "ಕೊಡಗು"
ಏಜಂಟರು, ವೀರಾಜಪೇಟೆ.

ಕಾರ್ಯನಿರ್ವಹಣೆಯ ರಚನಾತ್ಮಕ ಕಾರ್ಯಕ್ರಮವು
ಅಭ್ಯುದಯ ಮತ್ತು ಅಭಿವೃದ್ಧಿಯ ಹೆಜ್ಜೆಯೊಡನೆ ಓಡಲು
ಯಾವಾಗಲೂ ನಮಗೆ ಸಹಾಯಕವಾಗುತ್ತದೆ.

ಈ ವಿಷಯವು ಕೆಳಗೆ ನಮೂದಿತವಾಗಿರುವ ಭಾರತದ ಪ್ರಖ್ಯಾತ ಮತ್ತು ಪ್ರಮುಖ ಇನ್‌ಷ್ಯೂರೆನ್ಸ್ ಗೆಜೆಟ್ಟುಗಳ ಪ್ರಶಂಸೆಯಿಂದ ನಿಖರವಾಗುತ್ತದೆ.

x x x x x

(ಎ) "ಇನ್‌ಷ್ಯೂರೆನ್ಸ್ ವರ್ಲ್ಡ್" ತನ್ನ ಆಕ್ಟೋಬರ್ ೧೯೪೯ರ ಸಂಚಿಕೆಯಲ್ಲಿ ಈ ರೀತಿ ಬರೆಯುತ್ತದೆ:

"ವರ್ಷದೊಡನೆ ಆಗಮಿಸಿದ ಹಲವು ಕುಂದುಕೊರತೆಗಳಿದ್ದಾಗ್ಯೂ ೧೯೪೯ನೇ ವರ್ಷ" ಬೆಂಗಳೂರು ಪ್ರಾವಿಡೆಂಟಿಗೆ ವ್ಯಾಪಾರ-ದೃಷ್ಟಿಯಲ್ಲಿ ಫಲಕಾರಿಯೂದ ಮತ್ತೊಂದು ವರ್ಷವಾಯಿತು.... ಈ ವಿಮರ್ಶಾತ್ಮಕ ಸಾಲಿನ ಹಿನ್ನೆಲೆಯನ್ನು ಗಮನಿಸಿದರೆ ಇದು ತುಂಬ ತೃಪ್ತಿಕರವೆಂದೇ ಗಣಿಸಬೇಕು.... ಈ ವರ್ಷದಲ್ಲಿ ಸಂಸ್ಥೆಯು ಬಡ್ಡಿಯು ಶೇ. ೪.೨ಕ್ಕೆ ಹೆಚ್ಚಿದ್ದಕ್ಕಾಗಿ ಸಂತೋಷ ಸೂಚಿಸಬೇಕು. ಬೆಂಗಳೂರು ಪ್ರಾವಿಡೆಂಟಿನ ಏಕಮಟ್ಟದ ಅಭ್ಯುದಯಕ್ಕೆ, ಸಂಸ್ಥೆಯ ಅಧ್ಯಕ್ಷ ಹಾಗೂ ಮ್ಯಾನೇಜಿಂಗ್ ಡೈರೆಕ್ಟರಾದ ಶ್ರೀ ಹೆಚ್. ವೆಂಕಟರಾಮಯ್ಯನವರೂ, ಹಾಗೂ ಕಾರ್ಯದರ್ಶಿ ಮತ್ತು ವ್ಯವಸ್ಥಾಪಕರಾದ ಶ್ರೀ ಎನ್. ವಿ. ನಾರಾಯಣಮೂರ್ತಿ, ಬಿ.ಎ., ಬಿ.ಎಲ್. ರವರೂ ಮೂಲ ಕಾರಣರೆಂದು ಒತ್ತಿ ಹೇಳಬೇಕಾಗಿದೆ ....."

x x x x x

(ಬಿ) ಇಂಡಿಯನ್ ಇನ್‌ಷ್ಯೂರೆನ್ಸ್ ಜರ್ನಲ್ ತನ್ನ ಸೆಪ್ಟೆಂಬರ್ ೧೯೪೯ರ ಸಂಚಿಕೆಯಲ್ಲಿ ಈ ರೀತಿ ಬರೆಯುತ್ತದೆ:

ಬೆಂಗಳೂರು ಪ್ರಾವಿಡೆಂಟ್ ಇನ್‌ಷ್ಯೂರೆನ್ಸ್ ಕಾರ್ಪೊರೇಷನ್ ಲಿ.....ನ ಮುಂದುವರಿಯುತ್ತಿರುವ ಉತ್ಸಾಹಿಯು ಸಂಸ್ಥೆಯ ವ್ಯವಸ್ಥಾಪಕ ವರ್ಗದ ಹಿರಿಮೆಯು ಉತ್ಸಾಹವನ್ನು ಮತ್ತು ಕಾರ್ಯದಕ್ಷತೆ, ಬುದ್ಧಿವಂತಿಕೆಗಳನ್ನು ವ್ಯಕ್ತಪಡಿಸುತ್ತವೆ.... ಹೋಲಿಕೆಯಲ್ಲಿ ದಿ ಬೆಂಗಳೂರು ಪ್ರಾವಿಡೆಂಟ್ ಇನ್‌ಷ್ಯೂರೆನ್ಸ್ ಕಾರ್ಪೊರೇಷನ್, ಭಾರತದ ಹಲವು ಪ್ರಾವಿಡೆಂಟ್ ಸಂಸ್ಥೆಗಳಿಗಿಂತ ನೂತನವಾದರೂ, ಸದ್ಯದಲ್ಲಿ ಆದರಷ್ಟು ಕಾಲದ ಎಲ್ಲಾ ಪ್ರಾವಿಡೆಂಟ್ ಸಂಸ್ಥೆಗಳಿಗಿಂತಲೂ ಇದು ಅತಿ ದೊಡ್ಡದು ಮತ್ತು ಜಯಪ್ರದವಾದುದು.

x x x x x

ಈ ಸನ್ನಿವೇಶಗಳಿರುವಾಗ ಪ್ರಗತಿದಾಯಕ ಹಾಗೂ ಜನಪ್ರಿಯವೆನಿಸಿಕೊಂಡಿರುವ ವಂಶಪಾರಂಪರ್ಯವಾಗಿ ಸಲ್ಲುವ ಕವಿಷನ್ನಿನ ಸೌಕರ್ಯವ ಈ ಸಂಸ್ಥೆಯನ್ನು ಸೇರಿರಿ.

ಬೇಕಾಗಿದ್ದಾರೆ.

ಇಂಡಿಯನ್ ಡೊಮಿನಿಯನ್ ಆದ್ಯಂತ ಆರ್ಗನೈಜರುಗಳು, ಸ್ಪೆಷಲ್ ಏಜೆಂಟರುಗಳು ಮತ್ತು ಏಜಂಟರುಗಳು ಆಕರ್ಷಕ ರೀತಿಯ ಸಂಬಳ ಅಥವಾ ಕವಿಷನ್ ನೇಲೆ ಬೇಕಾಗಿದ್ದಾರೆ.

ವಿವರಗಳಿಗೆ ಕೆಳಕಂಡ ವಿಳಾಸಕ್ಕೆ ಬರೆಯಿರಿ:

ಮ್ಯಾನೇಜಿಂಗ್ ಡೈರೆಕ್ಟರ್
ದಿ ಬೆಂಗಳೂರು ಪ್ರಾವಿಡೆಂಟ್ ಇನ್‌ಷ್ಯೂರೆನ್ಸ್ ಕಾರ್ಪೊರೇಷನ್ ಲಿಮಿಟೆಡ್.
ಹೆಡ್ ಆಫೀಸ್:— "ವಿಷ್ಯಾಟಿಕ್ ಬಿಲ್ಡಿಂಗ್ಸ್" ಬೆಂಗಳೂರು ಸಿಟಿ.

ಗಮನಿಸಿರಿ!

ದಿನವಹಿ ಹೆಚ್ಚುತ್ತಿರುವ ಗ್ರಾಹಕರ ಬೇಡಿಕೆಯನ್ನು ಸಲ್ಲಿಸಲು ನಮ್ಮ ಅಂಗಡಿಯನ್ನು ವಿಸ್ತರಿಸಿರುವದಲ್ಲದೆ ಆತ್ಯತ್ತಮ ಸಿಲ್ಕ್, ಉಲನ್ ಮತ್ತು ಮಿಲ್ ಬಟ್ಟೆಗಳ ಯಥೇಚ್ಛ ಸ್ಟಾಕ್ ಇಡಲಾಗಿದೆ.
ಯಾವ ಸಮೂನೆಯ ಬಟ್ಟೆಗೂ ಆದರ್ಶವೆನಿಸಿದೆ.
ಆರ್ಡರ್ ಪ್ರಕಾರ ಅತೀ ಆಧುನಿಕ ರೀತಿಯಲ್ಲಿ ಉಡುಪುಗಳನ್ನು ಹೊಲಿದು ತಯಾರಿಸಿ ಕೊಡಲಾಗುವದು.

ಬಟ್ಟೆಯ ವಿಚಾರದಲ್ಲಿ ಏನು ಬೇಕು! ಪಟ್ಟೂ ಬ್ರದರ್ಸ್ ಎತ್ತಿದ ಕೈ!

ಪಟ್ಟೂ ಬ್ರದರ್ಸ್,
ಲಕ್ಷ್ಮೀ ಬಿಲ್ಡಿಂಗ್ಸ್,
52-4 ಟೌನ್‌ಹಾಲಿನ ಎದುರು, ಪೈ ಸೂರಂ

ಸ್ವತಂತ್ರ ಭಾರತದಲ್ಲಿ

ಅಧಿಕಾರಿ ವರ್ಗದ ಈ ವೈಧಿಲ್ಯವೇಕೆ ?

'ಈಸ್ಟರ್ನ್ ಟ್ರಾವೆಲ್' ಎಂಬ ಪತ್ರಿಕೆಯಲ್ಲಿ ಓರ್ವ ನಿರೀಕ್ಷಕರು ಒಂದು ವಿಚಾರಾರ್ಹ ಲೇಖನವನ್ನು ಬರೆದು ಬ್ರಿಟಿಷ್ ಅಡಳಿತಗಾರರ ನಿರ್ಗಮನಾನಂತರ ಭಾರತದ ಸರಕಾರ ಕಚೇರಿಗಳಲ್ಲಿ ಹೇಗೆ ಹಿಂದಿನಂತೇ ಪ್ರತಿಗಾಮಿತ್ವವು ಮುಂದುವರಿಯುತ್ತಿದೆ, ಹೇಗೆ ಲಂಚಗುಳಿತನದ ಹಾವಳಿಯು ವ್ಯಾಪಿಸುತ್ತಿದೆ. ಮತ್ತು ಅದರಿಂದಾಗಿ ಪ್ರಜಾನಿಯುಕ್ತ ಮಂತ್ರಿಗಳು ಕೂಡ ಹೇಗೆ ನಿಸ್ಸಹಾಯಕರಾಗುತ್ತಿರುವರು ಎಂಬುದನ್ನು ಕಟುತರವಾಗಿ ಬಹಿರಂಗಪಡಿಸಿದ್ದಾರೆ. ಆ ಲೇಖನದ ಸಾರಾಂಶವನ್ನಿಲ್ಲಿ ಕೆಳಗೆ ಕೊಡಲಾಗಿದೆ.

ಬ್ರಿಟಿಷರು ಹೊರಟು ಹೋಗಿ ಭಾರತೀಯರಿಗೆ ಸ್ವಾತಂತ್ರ್ಯ ಲಭಿಸಿತು. ಈಗ ಪರಕೀಯ ಯೂನ ಪ್ರಭಾವಗಳನ್ನು ತಡೆಯಲು ಶಕ್ತಿಯುಕ್ತವಾದ ನೆಹರು. ಪಟೇಲ್ ಅಡಳಿತವು ಅವಿಶ್ರಾಂತ ಶ್ರಮಿಸುತ್ತಿದೆ. ಇಷ್ಟಾದರೂ ನಮ್ಮ ಕಚೇರಿಗಳು ಬ್ರಿಷರ ಕಾಲದ ಹಾಡಿಯಲ್ಲಿ ಮುಂದುವರಿಯುತ್ತಿರುವುದು ತುಂಬಾ ಖೇದಕರವಾದ ವಿಚಾರ. ಇವನ್ನು ಸುಧಾರಿಸದಿದ್ದರೆ ನಮ್ಮ ದೇಶವು ಎಂದೂ ಮುಂದರಿಯಲಾರದು.

ಬ್ರಿಟಿಷ್ ಅಧಿಕಾರವು ತೆಗೆದು ಹಾಕಲ್ಪಟ್ಟ ನಂತರ ನಮ್ಮ ಸರಕಾರಿ ಕಚೇರಿಗಳು ದೇಶ ವಾತ್ಸಲ್ಯವನ್ನು ತಳೆದು ಎಲ್ಲಾ ಸ್ವಾರ್ಥ ಮತ್ತು ಅಧಿಕಾರ ಲಾಲಸೆಗಳನ್ನು ಬಿಟ್ಟು ಕಾವು ದೇಶದ ಜನತೆಯ ಸೇವಕರಾಗಿ ಆ ಜನತೆಯ ಉದ್ಧಾರಕ್ಕಾಗಿ ಕಾರ್ಯಗೆಯ್ಯುವಂತಹರಾಗುವರೆಂದು ಹಾರೈಸಲಾಗಿತ್ತು. ಆದರೆ ದುರ್ದೈವದಿಂದೆಂಬಂತೆ ಆ ಆಶೆಗಳು ಕೇವಲ ನಿರಾಶೆಗಳಾಗಿಯೇ ಉಳಿದುವು. ಕಾರಣ ಅಧಿಕಾರಲಾಲಸೆ ಎಂಬ ಮೋಹವು ಅಷ್ಟು ಮದಾಂಧತೆಯನ್ನುಂಟುಮಾಡಿಬಿಡುತ್ತಿದೆ. ಬಹಳ ವ್ಯಾಯ ಹೋದ ಮೇಲೆ ಅತ್ತೆಯ ಧಬ್ಬಳಿಕೆಯಿಂದ ವಿಮುಕ್ತಳಾಗಿ ಗೃಹಾಧಿಕಾರಕ್ಕೆ ಬಂದ ಸೊಸೆಯು ತನ್ನ ಸ್ಥಾನ ಮಹತ್ವದಿಂದ ಅತ್ತೆಯನ್ನು ಮೀರಿಸುವ ಸರ್ವಾಧಿಕಾರ ಪ್ರದರ್ಶನಕ್ಕೆ ಹೊರಟಂತಾಗಿದೆ! ಬ್ರಿಟಿಷರು ಹೋದಂದಿನಿಂದ ಸರ್ವ ಸ್ವತಂತ್ರರಾದ ನಮ್ಮ ಕಚೇರಿಯ ಮುಖ್ಯ ಪಾಳೆಯಗಾರರೂ ನಿಜವಾದ ಅಧಿಕಾರವನ್ನು ಹೊಂದಿ ಅದರ ಮತ್ತಿನಲ್ಲಿ ಮೈಮರೆತಿರುವಂತೆ ಕಾಣುತ್ತದೆ.

ಬ್ರಿಟಿಷರು ಆಳುತ್ತಿರುವಾಗ ಅವರು ಕಚೇರಿಗಳ ಮುಖ್ಯಾಧಿಕಾರಿಗಳಾಗಿ 'ಹಾವನ್ನು'ಗಳನ್ನೂ ಪಿತೂರಿ ನಡೆಸಲು ಪಸುರ್ಧರಾಗಿರುವವರನ್ನೂ ಒಂದಿಷ್ಟಾದರೂ ಪ್ರತಿಭೆಯಿಲ್ಲದವರನ್ನೂ ಜನಾಯಿಸುವುದು ಕ್ವಚಿತ್ತು. ಬ್ರಿಟಿಷರು ಹೊರಟು ಹೋದ ನಂತರ ಇಂತಹ ಅನೇಕ ಮುಖ್ಯಾಧಿಕಾರಿಗಳ ಸ್ಥಾನಗಳು ತೆರವಾದವು. ಅವುಗಳನ್ನು ತುಂಬಲು ಹಿಂದೆ ಅವರ ಕೈಕೆಳಗೇ ತಗಡೇತಾದ ಪ್ರಾಂತೀಯ ಕಚೇರಿಗಳ ಆತೀ ಹೆಚ್ಚಿನ ಸರ್ವಿಸಿನವರನ್ನು ಆ ಸ್ಥಾನಗಳಿಗೆ ಆರಿಸಲಾಯಿತು. ಇವರಲ್ಲಿ ಹೆಚ್ಚಿನವರು 'ಸ್ವತಂತ್ರ ವಿಚಾರ ಸಾಮರ್ಥ್ಯ ರಹಿತರೂ' ಪಿತಲಾಟದಲ್ಲಿ ಚುತುರರೂ ಆಪವರೇ ಇರುವರೆಂದು ಹೇಳಲಾಗಿದೆ. ಪರಿಣಾಮವಾಗಿ ಸರಕಾರಿ ಕಚೇರಿ ಅಡಳಿತವು ಕಲ್ಪನಾತೀತವಾದ ದುರವಸ್ಥೆಯಲ್ಲಿದೆ. ಇಷ್ಟಾದರೂ ಈ ಹೊಸ ಮುಖ್ಯಾಧಿಕಾರಿಗಳು ಬ್ರಿಟಿಷರು ಹೇಗೆ ನಿರ್ವಹಿಸುತ್ತಿದ್ದರೊ ಅದಕ್ಕೂ ಒಂದು ಬಣ್ಣ ಮೀಗಿಲಾಗಿ ಎಂಬಂತೆ ತಮ್ಮ ಆಧಿಕಾರ ಭಾರವನ್ನು ತಿರುಪುತ್ತಿರುವರು. ಆದುದರಿಂದ ಇಂದು ದೇಶದ ದಲ್ಲಿ ಈ ಕಚೇರಿ ಅಡಳಿತಗಳಲ್ಲಿ ಹೆಚ್ಚಿಚ್ಚು ಅವ್ಯವಸ್ಥೆ, ಲಂಚ ವಂಚನೆಗಳು ನಡೆಯುತ್ತಿವೆಯೆಂದು ದೇಶದಲ್ಲಿ ನಾನಾ ತರದ ದೂರು ದೂಷಣೆಗಳಿದ್ದರೆ ಶೌತ್ರದ ಸಂಗತಿಯಲ್ಲ. ಇದರಿಂದಾಗಿ ಅಡಳಿತ ಕಾರ್ಯ ಹೆಚ್ಚಿಚ್ಚು ವಿಳಂಬಕಾರಕವೂ ಅಡ್ಡಿಯದೂ ಆಗಿರುವುದು ಸಹಜವೇ ಎನ್ನಬೇಕು. ಈ ಪರಿಸ್ಥಿತಿ ಎಷ್ಟಕ್ಕೆ ತಲುಪಿದೆ ಎಂದರೆ ಜನತೆ ಈಗಿನ ಕಾಂಗ್ರೆಸ್ ಅಡಳಿತಕ್ಕಿಂತ ಬ್ರಿಟಿಷರ ಅಡಳಿತವಲ್ಲೇ ಹೆಚ್ಚು ಸುಖಕರವಾಗಿತ್ತೆಂದು ಕೆಲವರು ಹೇಳಲೂ ಹಿಂಜರಿಯುವುದಿಲ್ಲವಾಗಿದೆ.

ಬ್ರಿಟಿಷರ ಅಡಳಿತದಲ್ಲಿ ನಿಸ್ಸಂದೇಹವಾಗಿ ಮೇಚ್ಚುಗೆಯುವರಿಗೆ ಕೆಲಸ ಕೊಡುವ ಧೋರಣೆಯೇನೊ ಇತು. ಆದರೆ ತಮ್ಮ ಹಿತಬಾಂಧವರಿಗೇ ಕೆಲಸಗಳನ್ನು ಕೊಡುವಂತಾಗುವ ಪರಿಸ್ಥಿತಿಗಳಿಗೆ ಆಗ ಹೆಚ್ಚು ಅವ್ಕಾಶವಿರಲಿಲ್ಲ. ಈಗ ಮೆಚ್ಚಿಗೆಯವರಿಗೆ ಮಾತ್ರವಲ್ಲ ಅಪ್ಪ ಬಂಧು ಭಾಂಧವರಿಗೇ ಕೆಲಸಗಳನ್ನು ಮಾಡಿ ಕೊಡುವ ಹವ್ಯಾಸವೇ ಹೆಚ್ಚಾಗಿದೆ. ಈಗಿನ ಹಿಂದಿಯ ಖಜೇರಾಡಳಿತ ಧೋರಣೆಗಳ ಹೆಚ್ಚಳದ ದೃಷ್ಟಿಯಿಂದ ಇದು ಅನಿವಾರ್ಯವೂ ಆಗಿದೆ. ಬ್ರಿಟಿಷ್ ಅಧಿಕಾರಿಗಳ ಬಂಧು ಬಾಂಧವರು ಅವರ ಬಳಿ ಹೆಚ್ಚಿನ ಸಂಖ್ಯೆಯಲ್ಲಿರಲಿಲ್ಲ ಅವರಿಂದೀ ಅಧಿಕಾರಿಗಳಿಗಾದರೂ ಸರಕಾರದ ರೈಟ್ ಚೂರುಗಳನ್ನು ಕಾಯುವ ಅವರ ಬಂಧು ಬಳಗವು ಹತ್ತಿರದಲ್ಲೇ ಇದೆ. ತಮ್ಮವರು ಅಧಿಕಾರದಲ್ಲಿರುವಾಗ ತಮಗೇ ಸರಕಾರಿ ಕೆಲಸಗಳು ದೊರೆಯಬೇಕಾದುದು ಜನ್ಮಸಿದ್ಧ ಹಕ್ಕು ಎಂದೂ ಭಾವಿಸಲ್ಪಡುವಂತಾಗಿದೆ. ಭಾರತವು ೧೫-೮-೪೭ರಂದು ಸ್ವತಂತ್ರವಾದಾಗ ಕೆಲವು ತಿಂಗಳ ತನಕ ಈ ಕಚೇರಿ ಮುಖಂಡರು ಇಂತಹ ಅನ್ಯಾಯವನ್ನು ಕೈಕೊಳ್ಳಲು ಸ್ವಲ್ಪ ಹಿಂಜರಿದರು. ತಮ್ಮ ನೋಲೆ ಅಂತಹ ಬಿಗಿವಾದ ನಿಯಂತ್ರಣದ ಧೋರಣೆಯು ನಿರ್ವಹಿಸಲ್ಪಡುವುದೊ ಎಂದವರು ನಿರೀಕ್ಷಿಸಿಕೊಂಡಿದ್ದರು. ಆದರೆ ಕಚೇರಿ ಅಡಳಿತವು ಹಿಂದಿನಂತೇ ನಡೆಯಲ್ಪಡುವುದೆಂದೂ, ಸ್ವಸ್ಥ ವಿನಿಮಿತ್ತದ ವ್ಯವಹಾರದಲ್ಲಿ ಕೈಹಾಕಲು ಮಂತ್ರಿಗಳಿಗೂ ಅಧಿಕಾರವಿಲ್ಲವೆಂದೂ ಸ್ಪಷ್ಟವಾದ ಕೂಡಲೇ ಇವರು ಧೈರ್ಯವನ್ನು ತಳೆದರು.

ಸರಕಾರಿಕ ಧೋರಣೆಗಳಲ್ಲಿನ ಮುಖ್ಯಾಧಿಕಾರಿಗಳು ಹಿಂದಿನಂತೆ 'ಈಗಲೂ ಎಲ್ಲಾ ಹೊಣೆಗಾರಿಕೆಗಳನ್ನು ತಮ್ಮ ಕೈಕೆಳಗಿನವರ ಮೇಲೆ ಹೊರಿಸಿ ಕಾರ್ಯ ನಡೆಯುತ್ತಿರುವರು. ಆದುದರಿಂದ ಸಹಜವಾಗಿ ಅವುಗಳಲ್ಲಿ ಯಾವ ವಿಳಂಬಗಳಾದರೂ ಅವರು ಹೊಣೆಗಾರರಲ್ಲ. ಕೇಳುವವರೂ ತಡೆಯುವವರೂ ಯಾರೂ ಇಲ್ಲದಿದ್ದರೆ, ಇರುವ ಮುಖ್ಯಾಧಿಕಾರಿಗಳಲ್ಲಿ ಯಾವ ಸ್ವತಂತ್ರ ವಿಚಾರದ ಹೊಸ ಧೋರಣೆಯನ್ನು ಪ್ರಾರಂಭಿಸುವ ಸ್ವಯಂಪ್ರತಿಭೆಯಿಲ್ಲದಿದ್ದರೆ ಹೇಗಾಗುವುದು? ಈಗ ಹಾಗೇ ಆಗಿದೆಂದು ದೂರುಗಳು ಹೆಚ್ಚುತ್ತಿವೆ.

ಸರಕಾರ ಖಾತೆಗಳಿಗೆ ಮುಖ್ಯ ಕಾರ್ಯದರ್ಶಿಗಳೊಬ್ಬರಿದ್ದಾರೆ, ಇವರ ಕಾರ್ಯಕಲಾಪಗಳನ್ನು ಪರಿಶೀಲನೆ ಮಾಡುವವರಾರು? ಅವರೇ ಕೊನೆಯ ಅಧಿಕಾರಿ. ಮಂತ್ರಿಗಳೂ ಅವರ ಮಾತನ್ನು ಮನ್ನಿಸಲೇಬೇಕು. ಅವರು ಶಿಫಾರಸ್ ಮಾಡಿದವರನ್ನು ಮಂತ್ರಿಗಳು ಮಂಜೂರು ಮಾಡದಿದ್ದರೆ ಆಡಳಿತದಲ್ಲಿ ಹೆಚ್ಚಿನ ವಿಳಂಬಗಳಿಗೆ ಆಸ್ಪದವಾಗುತ್ತದೆ. ಮತ್ತು ಅದರ ಹೊಣೆಗಾರಿಕೆ ಕೊನೆಗೆ ಮಂತ್ರಿಗಳ ತಲೆಯ ಮೇಲೆ ಬೀಳುವುದು. ಹೀಗೆ ಸಹಕಾರ್ಯದರ್ಶಿ, ಸಹಾಯಕಕಾರ್ಯದರ್ಶಿ, ಜತೆಕಾರ್ಯದರ್ಶಿ ಉಪಕಾರ್ಯದರ್ಶಿಗಳ ಸ್ಥಾನಗಳನ್ನು ನಿರ್ಮಿಸಲಾಗುವುದು. ಇವುಗಳನ್ನು ಭರ್ತಿಮಾಡುವ ಅಧಿಕಾರವೆಲ್ಲ ಮುಖ್ಯ ಕಾರ್ಯದರ್ಶಿಗಳಿಗೆ. ಹೀಗೆ ಹೆಚ್ಚು ಸಂಬಳದ ಸ್ಥಾನಗಳು ನಿರ್ಮಿಸಲ್ಪಟ್ಟ ಕೂಡಲೇ ಅವು ಭರಾಯಿಸಲ್ಪಡುತ್ತವೆ. ಈ ಸ್ಥಾನಗಳಿಗೆ ನಿಯುಕ್ತರಾದವರಿಗೆ ನಿಜವಾಗಿ ಅಷ್ಟೊಂದು ಕೆಲಸವಿದೆಯೊ, ಅವರೇನೆನ್ನೆಲ್ಲ ಮಾಡುವರು ಎಂಬುದು ಮಂತ್ರಿಗಳಿಗೆ ತಿಳಿದಿರುತ್ತದೊ ಹೇಳಬರುವುದಿಲ್ಲ. ಕೆಲವೊಮ್ಮೆ ತಾತ್ಕಾಲಿಕ ಅಧಿಕಾರಿಸ್ಥಾನಗಳನ್ನು ನಿರ್ಮಿಸಲಾಗುವುದು. ಮತ್ತೆ ಅವುಗಳ ಅವಶ್ಯಕತೆಯಿದೆಯೊ ಇಲ್ಲವೋ ಎಂಬುದನ್ನು ಯಾರೂ ನೋಡುವಂತಿಲ್ಲ. ಮಾತ್ರವಲ್ಲ, ಆ ತಾತ್ಕಾಲಿಕವಾದ ಸ್ಥಾನಗಳು ನಿರಂತರವಾಗಿ ಮುಂದರಿದರೂ ಅವುಗಳನ್ನು ಮುಕ್ತಾಯಗೊಳಿಸಬೇಕೆಂದು ಯಾರಿಗೂ ನೆನಪು ಉಳಿಯುವಂತಿಲ್ಲ.

ಕೆಲವೊಂದು ಸಲ ಲಂಚವಂಚನೆಗಳ ದೂರುಗಳು ಮಂತ್ರಿಗಳಿಗೆ ರಾಶಿಗಟ್ಟಿಯಲ್ಲಿ ಕಳುಹಿಸಲ್ಪಟ್ಟಾಗ ಒಂದು ತರದ ವಿಚಾರಣೆಯನ್ನು ನಡೆಸಲಾಗುವುದು. ಆದರೆ ವಿಚಾರಣೆ ನೂಡುವವರಾರು? ಮತ್ತೆಮ್ಮೆ ಅದು ಖಾತೆಯ ಮುಖ್ಯಾಧಿಕಾರಿಗಳು ತಮ್ಮ ಕೈಕೆಳಗಿನವರ ಮೂಲಕ ಜರುಗಿಸುವುದು. ಕೆಲವೊಮ್ಮೆ ಮುಖ್ಯಾಧಿಕಾರಿಗಳೇ ಆ ಲಂಚವಂಚನೆಗಳಲ್ಲಿ ಶಾಮೀಲದಿದವರಾಗಿದ್ದರೆ ಅವರ ಕೈಕೆಳಗಿನವರಿಗೆ ಅದನ್ನು ಹೊರಗೆಡಹಲು ಧೈರ್ಯಸಾಲದೆ ಆರೋಪಿತರಾದ ಆ ಕನಿಷ್ಟ ಅಧಿಕಾರ ವರ್ಗದವರಿಗೆ ಅವರ ಆರೋಪಗಳನ್ನು ಸರಿಪಡಿಸಲು ಸಂದರ್ಭವನ್ನು ಕಲ್ಪಿಸಲಾಗುವುದು. ಆ ಮೇಲೆ ಆ ಆರೋಪವನ್ನು ನಿರಾಧಾರವಾದುದೆಂದು ತೀರ್ಮಾನಿಸಲಾಗುವುದು. ಇಂತಹ ಅನಂತವಾದ ನಿದರ್ಶನಗಳನ್ನು ನಿರೂಪಿಸಬಹುದು.

ಮುಖ್ಯವಾಗಿ ನಮ್ಮ ದೇಶವು ಆರ್ಥಿಕ ಪ್ರಪಂಚದಲ್ಲಿ ಅವಶ್ಯವಿದ್ದ ಮುನ್ನಡೆಯನ್ನು ಹೊಂದಿ ಶಕ್ತಿ ರಾಷ್ಟ್ರಗಳಲ್ಲಿ ಗಣನೀಯವಾಗಬೇಕಾದರೆ, ಮತ್ತು ದೇಶದಲ್ಲಿ ಸರ್ವತೋಮುಖ ಪ್ರಗತಿಗಳಾಗಲು ಅವಶ್ಯವಾದ ಶಾಂತಿ ನೆಮ್ಮದಿಯ ವಾತಾವರಣ ಕಲ್ಪಿತವಾಗಬೇಕಾದರೆ ನಮ್ಮ ಕಚೇರಿ ಅಡಳಿತವು ಸಸೂತ್ರವಾಗಿಯೂ ಯಾವ ವಂಚನೆಗಳಿಗೂ ಆಸ್ಪದವಿಲ್ಲದಂತೆಯೂ ನಡೆಯುವಂತೆ ನೋಡಿಕೊಳ್ಳಬೇಕು.

ಸ್ವ. ಮೂ.

THE WARDEN INSURANCE CO., Ltd.

Head Office: Bombay.

LIFE, FIRE, ACCIDENT, MOTOR & W. C. INSURANCES.

Managing Director; – S. H. THAKER.

Business in force	Rs. 75,00,00,000
Assets	,, 1,00,00,000
Income	,, 35,00,000

Also LOCAL MANAGERS OF

THE LONDON GUARANTEE & ACCIDENT CO., Ltd.

(Incorporated in England)

Assets Exceed Rs. 10,00,00,000

a Subsidiary Company of

THE PHOENIX ASSURANCE CO. Ltd.

(One of the Largest Assurance Companies in the World)

Assets Exceed Rs. 45,00,00,000

Transact FIRE INSURANCE

Enquiries for representation solicited.

Apply to;

Chief Agency Office, *Virajpet (Coorg)* or A. S. Aiyappa, *Branch Secretary, Gandhinagar, BANGALORE CITY*

ದಿ ಟ್ರೊಪಿಕಲ್

ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:– ಲಾಲ ಶಂಕರ್ ಲಾಲ್.

ಮುಖ್ಯ ಖಜೇರಿ:– ಹೊಸ ಡೆಲ್ಲಿ.

ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು. ಎಸ್. ಶ್ರೀನಿವಾಸ ಅಯ್ಯಂಗಾರ್
ಹಕೀಮ್ ಅಜಮಲಖಾನ್. ಡಾ|| ಎಂ. ಎ. ಅನ್ಸಾರಿ.

Transacts:—Life, Fire, Motor and Marine.

ನಮ್ಮ ಹೊಸ ವಿಸ್ತಾರದ ಯೋಜನೆಯಲ್ಲಿ ಆಕರ್ಷಕ ಕಮಿಷನ್ ಮೇಲೆ ಏಜನ್ಸಿಗೆ ದಯವಿಟ್ಟು ಕೆಳಗಿನ ವಿಳಾಸಕ್ಕೆ ಬರೆಯಿರಿ.

ಆರ್ಗನೈಜರ್
ದಕ್ಷಿಣ ಕೊಡಗು, ಪೊನ್ನಂಪೇಟೆ.

ಅಥವಾ

ಯಂ. ಯು. ಅಚ್ಚಣ್ಣ,
ಏಜೆನ್ಸಿ ಸುಪರಿಂಟೆಂಡೆಂಟ್,
ಮಡಿಕೇರಿ, ಕೊಡಗು.

ಆರ್ಗನೈಜರ್
ಉತ್ತರ ಕೊಡಗು, ಮಡಿಕೇರಿ.

ಅಥವಾ

ಎಂ. ಎ. ಬೆಳ್ಯಪ್ಪ,
ಬ್ರಾಂಚ್ ಸೆಕ್ರೆಟರಿ,
ಹಂಪನಕಟ್ಟಾ, ಮಂಗಳೂರು.

ಮತ್ತೊಂದು ಉಜ್ವಲ ವರ್ಷ.

1948ನೇ ವರ್ಷದ ವಾರ್ಷಿಕ ವರದಿಯ ಪ್ರಾಮುಖ್ಯಾಂಶಗಳು.

ಹೊಸ ಉದ್ಯಮ ರೂ.	6,13,00,000	ಮೊದಲ
ಚಾಲ್ತಿಯಲ್ಲಿರುವ ಒಟ್ಟು ಉದ್ಯಮ ರೂ.	27,73,00,000	,,
ಒಟ್ಟು ನಿಧಿ. ರೂ.	8,30,00,000	,,
ಸ್ಥಾಪಿತವಾದಂದಿನಿಂದ ಪಾವತಿಯಾದ ಕ್ಲೈಮುಗಳು	10,96,00,000	,,

1,28,000 ಕ್ಕೆ ಮೀರಿದ ತೃಪ್ತಿ ಪಡೆದ ಪಾಲಿಸಿದಾರರು.

ಶಕ್ತಿ. ಸೇವೆ. ಭದ್ರತೆ.

ಎಂಪೈರ್ ಆಫ್ ಇಂಡಿಯಾ

ಲೈಫ್ ಎಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ,—1897

ರೋಶನ್‌ಲಾಲ್, ಜನರಲ್ ಮೇನೇಜರ್.

ಪ್ರಧಾನ ಕಛೇರಿ:
ಎಂಪೈರ್ ಹೌಸ್, ಹಾರ್ನ್‌ಬಿ.
ರೋಡ್, ಫೋರ್ಟ್, ಬೊಂಬೈ.

ಅಂಗ ಕಛೇರಿ:
ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್,
ಕೆಂಪೇಗೌಡರಸ್ತೆ, ಬೆಂಗಳೂರು.

ದಿ ಕೂರ್ಗ್ ಜನರಲ್ ಇಂಡಸ್ಟ್ರೀಸ್ ಲಿಮಿಟೆಡ್,
ಫೈಜರ್ ಪೇಟೆ.
ಬೇಕಾಗಿದ್ದಾರೆ.

ಕೊಡಗಿನ ಪ್ರತಿ ಗ್ರಾಮ ಮತ್ತು ಪಟ್ಟಣಗಳಲ್ಲಿ ಬಿದ್ದು ಮಣ್ಣಾಪಾಲಾಗಿ ಹೋಗುತ್ತಿರುವ ಮೂಳೆಗಳನ್ನು ಶೇಖರಿಸಿಕೊಡಲು ಪ್ರತಿ ಹಳ್ಳಿ ಮತ್ತು ಪಟ್ಟಣಗಳಲ್ಲಿ ಏಜೆಂಟರುಗಳು ಬೇಕಾಗಿದ್ದಾರೆ. ಏಜೆಂಟರುಗಳಿಗೆ ಧಾರಾಳವಾದ ಕಮಿಷನ್ ಕೊಡಲಾಗುತ್ತದೆ.

ನೇಮಕವಾದ ಏಜೆಂಟರುಗಳು ಕಂಪೆನಿಯಿಂದ ಗೊತ್ತಾದ ಸ್ಥಳಕ್ಕೆ ಮೂಳೆಗಳನ್ನು ಸಾಗಿಸಿ ಕೊಟ್ಟಲ್ಲು ಮಣ ಒಂದರ ರೂ. 0–12–0 ಯಂತೆ ಕೊಡಲಾಗುವುದು.

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಫೈಜರ್‌ಪೇಟೆ,
ತಾ. 32-9-49.

ಕೆ. ಕೆ. ತಿಮ್ಮಯ್ಯ,
ಮೇನೇಜಿಂಗ್ ಡೈರೆಕ್ಟರ್.

ಪ್ಲಾಂಟರುಗಳ ಅವಗಾಹನೆಗೆ.

ಈಗಾಗಲೇ ಹಲವಾರು ತೋಟದ ಮೂಲೀಕರಿಂದ ತಮ್ಮ ತೋಟಗಳಿಗೆ ಗೊಬ್ಬರ ಸಿಗುತ್ತದೋ, ಪರ್ಮಿಟ್ ಕೊಡಲಾಗುತ್ತದೋ ಎಂಬದಾಗಿ ಅರ್ಜಿಗಳು ಬರುತ್ತಿವೆ. ಈ ಸಂದರ್ಭದಲ್ಲಿ ಇಂಡಿಯಾ ಸರ್ಕಾರದವರು ತೋಟದ ಉಪಯೋಗಕ್ಕಾಗಿ ಈ ವರೆಗೆ ಸೂಪರ್ ಫಾಸ್ಫೇಟ್ ಒಂದಲ್ಲದೆ ಬೇರೆ ಯಾವ ಗೊಬ್ಬರವನ್ನೂ ಕೊಟ್ಟ್ರುವುದಿಲ್ಲವಾಗಿಯೂ ಈ ವಿಷಯ ಇಂಡಿಯಾ ಮತ್ತು ಮೈಸೂರು ಸರಕಾರಗಳೊಡನೆ ತಕ್ಕ ಪತ್ರವ್ಯವಹಾರ ನಡೆಯುತ್ತಿದೆಯೆಂದೂ ಮತ್ತು ಒಂದು ನಿಷ್ಕರ್ಷೆಗೆ ಬಂದೊಡನೆ ಸರ್ವರಿಗೂ ಪತ್ರಿಕೆಯ ಮೂಲಕ ತಿಳಿಸಲಾಗುವುದೆಂದೂ ಕೊಡಗು ವ್ಯವಸಾಯ ಇಲಾಖಾ ಆಫೀಸರು ಸರ್ವರಿಗೂ ಈ ಮೂಲಕ ತಿಳಿಯಪಡಿಸುತ್ತಾರೆ ಸೂಪರ್ ಫಾಸ್ಫೇಟ್ ಬೇಕಾದವರು ಒಡನೆ ತಮ್ಮ ಅರ್ಜಿಗಳನ್ನು ಆಯಾಯ ಪ್ಲಾಂಟರ್ಸ್ ಅಸೋಸಿಯೇಶನ್‌ಗಳ ಮುಖಾಂತರ ಕೊಡಗು ವ್ಯವಸಾಯ ಇಲಾಖೆಗೆ ತಲಪಿಸಬಹುದು.

—

ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. .32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245 ರ ವರೆಗೆ.
2. .32 ರಿವಾಲ್ವರುಗಳು (Revolvers) ,, 262 ,, 274 ,,
3. 12ನೇ ನಂಬರಿನ ಜೋಡು ಹೊಳವಿನ ಕೋವಿ (Webley & Scott) ಕ್ರಯ ರೂ. 1492/-
4. 12ನೇ ನಂಬರಿನ ಜೋಡು ಹೊಳವಿನ ಕೋವಿ (Spanish make) ಕ್ರಯ ರೂ. 627–5–0
5. 6 ಗಜದ (Hand loom) ಖೈದ್ದಿಗ್ಗದ ಸೀರೆಗಳು ಕ್ರಯ ರೂ. 4-10-0
6. 12, 16, 20ನೇ ನಂಬರು ಕೋವಿಗಳ ತೋಟಗಳೂ ಪಿಸ್ತೂಲು ಮತ್ತು ರಿವಾಲ್ವರುಗಳ ತೋಟಗಳೂ ಸಹ ದೊರೆಯುತ್ತವೆ.

(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದವರಿಗೆ ಮಾತ್ರ ದೊರೆಯುವದು)

ಎಂ. ಎಸ್. ಸೋಮಯ್ಯ,
ಗೌರವ ಕಾರ್ಯದರ್ಶಿ.

52–23

CRESCENT

FOR PROTECTION AND SERVICE.

It is best to represent and insure with

The CRESCENT Insurance Co., Lt.d,

H: O: BOMBAY.] *[Established 1919.*

For particulars write to:

Sri B. A. Poovaiah *Organiser Pollibetta, Coorg.* **or The Branch Manager,** *22 B. Mahatma Gandhi Road, Bangalore 1.*

ಸುರಕ್ಷಿತವಾದ ಜೀವವಿಮೆ ಪಡೆಯಲು

ಕ್ರೆಸೆಂಟ್

ಇನ್ಶೂರೆನ್ಸ್ ಕಂಪೆನಿಗೆ ಬರೆಯಿರಿ.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ.ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ. 10,00,000.
ವಸೂಲಾದ ಶೇರು ಮೊಲಗು	ರೂ. 1,65,000.
ಕ್ಷೇಮನಿಧಿ	ರೂ. 50,000.

ಈ ಬ್ಯಾಂಕಿನಿಂದ ಹಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯೂ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರೆಸಿಟಿ ಮತ್ತು ವಾರ್ಡನ್ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,
ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಖಜಾಂಚಿ.

Edited, Printed and Published by P. I. Belliappa at 'Kodagu' Press, Mercara, for 'Kodagu' Ltd.